ಬೋಧಿವೃಕ್ಷದ ಬುಡದಲ್ಲಿ ಬುದ್ಧನಿಗೆ ಜ್ಞಾನೋದಯ ಆಗಿರಬಹುದು. ಆದರೆ ಅದು ವೈಯಕ್ತಿಕ ಮೋಕ್ಷ ಕೊಡುವ ಜ್ಞಾನೋದಯ. ಅಂಗುಲಿಮಾಲನ ಜೊತೆಗೆ ನಡೆದ ಮುಖಾಮುಖಿಯಿಂದ ಬುದ್ಧನಿಗೆ ಮತ್ತೊಂದು 'ಜ್ಞಾನೋದಯ' ಆಗುತ್ತದೆ. ಈ ಕ್ರಾಂತಿಕಾರಿ ಅಂಶವನ್ನು 'ಅಪ್ಪು' ಅವರ ಈ 'ಕಥನಕಾವ್ಯ' ಪರಿಣಾಮಕಾರಿಯಾಗಿ ಬಯಲು ಮಾಡಿದೆ.

ಇಂಗ್ಲಿಷ್ ರೊಮ್ಯಾಂಟಿಕ್ ಕವಿ ಕೋಲರಿಜ್ ಹೇಳುವಂತೆ ಇಲ್ಲಿ ಕಾವ್ಯದ ವಸ್ತುವೇ ಕಾವ್ಯದ ಭಾಷೆ, ಲಯ, ರೂಪಕಗಳನ್ನು ತನ್ನ ಸುತ್ತ ಹೆಣೆದುಕೊಂಡು "ಸಾವಯವ ಸಮಗ್ರೀಕರಣ ಬಲ"ವನ್ನು ಪಡೆದುಕೊಂಡಿದೆ.

ಹಿಂದೆ ರಾಜಮಹಾರಾಜರುಗಳ ಕಾಲದಲ್ಲಿ ಕಾವ್ಯ ವಂದಿಮಾಗಧರ, ಬ್ರಾಹ್ಮಣರ ಕೈಗೊಂಬೆಯಾಗಿತ್ತು. ನಂತರ ಪ್ರಜಾಪ್ರಭುತ್ವದಲ್ಲೂ ಪ್ರಾರಂಭದಲ್ಲಿ ಮೇಲುಜಾತಿ, ಮೇಲು ವರ್ಗದ ಜನರ ಐಷಾರಾಮೀ ಜೀವನದ ಮನರಂಜನಾ ವಸ್ತುವಾಗಿತ್ತು. ನಂತರ ನಿಧಾನಕ್ಕೆ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಚಳುವಳಿಗಳ ಮೂಲಕ ಜನಸಾಮಾನ್ಯರ ಸುಖ ದುಃಖಗಳ ದನಿಯಾಗತೊಡಗಿತು. ಇತ್ತೀಚೆಗೆ ಅದು ಶೋಷಿತ ಜನರ ಅಭಿವ್ಯಕ್ತಿ ಮಾಧ್ಯಮವಾಗಿ ಬೀದಿಗಿಳಿದಿದೆ, ಕಾಡುಸೇರಿದೆ. ಕ್ರಾಂತಿಯ ಹರಿಕಾರನಾಗಿ ಹೊರಹೊಮ್ಮತೊಡಗಿದೆ. ಅಪ್ಪುವಿನ ಈ ಕಥನಕಾವ್ಯ ಅಂತಹ ಪ್ರಗತಿಯ ನಿದರ್ಶನ.

ಕನ್ನಡ ಕಾವ್ಯ ಪರಂಪರೆ ನಿಂತ ನೀರಾಗಿದೆ ಎಂದು ಹೇಳಿದವರಾರು?

# ನಿರುತ್ತರಿ ಬುದ್ಧ

## ಕಥನ ಕಾವ್ಯ

'ಅಪ್ಪು'

ವಿಮುಕ್ತಿ ಪ್ರಕಾಶನ
2005

NIRUTTHARI BUDDHA : A Narrative poem by 'Appu'.
Published by : Vimukthi Prakashana, C/o M.N. Sundararaj, Mangalpet, Bidar.

ಮೊದಲನೇ ಆವೃತ್ತಿ - ಜನವರಿ 2005
ಪ್ರತಿಗಳು - 1000

ಮಾರಾಟದ ಬೆಲೆ - ರೂ. 20

ಮುಖಪುಟ ಚಿತ್ರ - ಕೆ. ಮಕಾಳಿ

ಪ್ರಕಟಣೆ : ವಿಮುಕ್ತಿ ಪ್ರಕಾಶನ
ಕೇರಾಫ್ ಎಂ.ಎನ್. ಸುಂದರರಾಜ್
ಮಂಗಲಪೇಟ
ಬೀದರ

ಪ್ರತಿ ಹುಣ್ಣ ವಾಸಿ ಮಾಡಲು
ಪ್ರತಿ ಹೃದಯ ಹಸನು ಮಾಡಲು
ತುಡಿದು ದುಡಿದು ಹಾಡಿ ಕುಣಿದು
ಮಲೆನಾಡಿನ ಮಕ್ಕಳಾದ
ನೊಂದ ಹೃದಯಗಳ ನೋವಾದ
ಕ್ರಾಂತಿ ಕಾವ್ಯದ ಮಿಡಿತವಾದ
**ಕಾಮ್ರೇಡ್ ಪಾರ್ವತಿ ಹಾಗೂ**
**ಕಾಮ್ರೇಡ್ ಹಾಜಿಮಾರ ನೆನೆಯುತ್ತಾ . . . .**

ಕಾವ್ಯ ಒಂದು ಅಭಿಪ್ರಾಯದ ಅಭಿವ್ಯಕ್ತಿ ಅಲ್ಲ
ರಕ್ತ ಸುರಿಯುತ್ತಿರುವ ಗಾಯದಿಂದ ಇಲ್ಲವೇ
ಮುಗುಳ್ನಗುತ್ತಿರುವ ಬಾಯಿಂದ ಹೊಮ್ಮಿದ ಗಾನ ಅದು
- ಖಲೀಲ್ ಗಿಬ್ರಾನ್

## ಬುದ್ಧನ ಅಹಿಂಸೆಗೆ ಅಂಗುಲಿಮಾಲನ ರಕ್ತ, ಉಸಿರು

'ಅಸ್ತಿತ್ವವಾದ' ಸಮರ್ಥವಾಗಿ ಪ್ರತಿಪಾದಿಸುವಂತೆ - ನಮ್ಮ ಜೀವನದ ಪ್ರತೀಕ್ಷಣ, ಸಂದರ್ಭಗಳಲ್ಲಿ "ಆಯ್ಕೆ" ಮಾಡುವುದು ಅನಿವಾರ್ಯ. ಆದರೆ, ನಾವು ಮಾಡುವ ಪ್ರತೀ ಆಯ್ಕೆಯ ಮೇಲೆ ನಮ್ಮ ನಮ್ಮ ಜಾತಿ, ಮತ, ಲಿಂಗ, ವರ್ಗ, ದೇಶ, ಜೀವನದೃಷ್ಟಿಗಳ ಹಿನ್ನೆಲೆ ಪ್ರಭಾವ ಬೀರಿಯೇ ಬೀರುತ್ತವೆ.

ಕಾವ್ಯಸೃಷ್ಟಿಯ ಸಂದರ್ಭದಲ್ಲಿ ಮುಖ್ಯವಾಗಿ ಎರಡು ಪ್ರಮುಖ ಆಯ್ಕೆಗಳು ನಡೆಯುತ್ತವೆ. ಒಂದು: ಹೇಳಬೇಕಾದ ಕಾವ್ಯ ವಸ್ತುವಿನ ಪರಿಣಾಮಕಾರಿ ಸಂವಹನಕ್ಕಾಗಿ ಸಂಕೇತ, ರೂಪಕ, ಪ್ರತಿಮೆ, ಪುರಾಣಗಳ ಆಯ್ಕೆ.

ಇನ್ನೊಂದು : ಜೀವನದೃಷ್ಟಿಯ ಆಯ್ಕೆ.

ಈ ಎರಡು ಆಯ್ಕೆಗಳು ಪ್ರಜ್ಞಾಪೂರ್ವಕವಾಗಿಯೇ ಆಗಬೇಕೇಂದೇನೂ ಇಲ್ಲ.

ಗಿರೀಶ್ ಕಾರ್ನಾಡರು 'ಯಯಾತಿ' ನಾಟಕದಲ್ಲಿ ಮಾಡಿರುವ ಆಯ್ಕೆ ಮತ್ತು ಬದಲಾವಣೆಗಳು, ಭೈರಪ್ಪನವರು 'ಪರ್ವ' ಕಾದಂಬರಿಯಲ್ಲಿ ಮಾಡಿಕೊಂಡಿರುವ 'ಮಹಾಭಾರತ' ಪುರಾಣದ ಆಯ್ಕೆ ಮತ್ತು ಬದಲಾವಣೆಗಳು, ಕುವೆಂಪು ಅವರು 'ರಾಮಾಯಣ ದರ್ಶನಂ'ನಲ್ಲಿ ಮಾಡಿರುವ ಆಯ್ಕೆ ಮತ್ತು ಬದಲಾವಣೆಗಳು, ಪೋಲಂಕಿ ರಾಮಮೂರ್ತಿಯವರು 'ಸೀತಾಯಣ'ದಲ್ಲಿ ಮಾಡಿರುವ ಆಯ್ಕೆ - ಅವರವರ ಜೀವನ ದೃಷ್ಟಿಯನ್ನು ಪ್ರತಿಪಾದಿಸುವುದಕ್ಕಾಗಿ ಮಾಡಿಕೊಂಡಿರುವ ಆಯ್ಕೆಗಳು - ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು.

ವಾಸ್ತವ ಹೀಗಿರುವಾಗ, ಲೇಖಕನೊಬ್ಬನ ಜೀವನದೃಷ್ಟಿಯ ಬಗ್ಗೆ ನಮಗೆ ಲಭ್ಯವಿರುವ ಕೃತಿಯೊಂದನ್ನು ಆಧರಿಸಿ ನಾವು ಹೇಳಲಾದೀತೇ? ಎನ್ನುವುದೊಂದು ಮೂಲಭೂತ ಪ್ರಶ್ನೆ.

ಉದಾಹರಣೆಗೆ, ಭೈರಪ್ಪನವರ ಬಲಪಂಥೀಯ ಜೀವನ ದೃಷ್ಟಿಯ ಬಗ್ಗೆ ನಮ್ಮಲ್ಲಿ ಭಿನ್ನಾಭಿಪ್ರಾಯವಿದ್ದಾಗಲೂ, ಕೇವಲ ಅವರು ಕತೆ ಹೇಳುವ ವಿಧಾನ, ಭಾಷಾ ಬಳಕೆಯ ಸೌಂದರ್ಯಕ್ಕಾಗಿ ಅವರ ಕಾದಂಬರಿಗಳನ್ನು ಮೆಚ್ಚಬಹುದೇ?

ಸಾಹಿತ್ಯ ಕೇವಲ ಮನರಂಜನೆಗಾಗಿ, ಎನ್ನುವ ನಿಲುವಿದ್ದವರು ಹಾಗೆ ಮಾಡಬಹುದು. ಆದರೆ, ಸಾಹಿತ್ಯ ಕೇವಲ ಮನರಂಜನೆಗಾಗಿ ಅಲ್ಲ, ಅದು ಬದುಕಿನ ಸಮಸ್ತ
ಸಂಕೀರ್ಣತೆ, ವಿರೋಧಾಭಾಸಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟು, ವಿಮರ್ಶಿಸಿ, 'ನೆಮ್ಮದಿಯ ನಾಳೆ'ಗಾಗಿ ಜೀವನಪರ ದೃಷ್ಟಿಕೋನ ಒದಗಿಸುವ ಸಾಮಾಜಿಕ ಜವಾಬ್ದಾರಿ
ನಿರ್ವಹಿಸಬೇಕು ಎನ್ನುವ ನಿರೀಕ್ಷೆ ಇರುವವರಿಗೆ ಹಾಗೆ ಮಾಡಲಾಗುವುದಿಲ್ಲ.

ಸಾಹಿತ್ಯದ ಬಗ್ಗೆ ಅಂತಹಾ ಘನ ನಿರೀಕ್ಷೆ ಉಳ್ಳವರು ಕಾವ್ಯವೊಂದರಲ್ಲಿ ಅದರ ಭಾಷೆ ಮತ್ತು ಜೀವನದೃಷ್ಟಿ - ಈ ಎರಡನ್ನೂ ಜತೆಜತೆಯಾಗಿ ವಿಮರ್ಶಿಸಿ, ಬೆಲೆ ಕಟ್ಟಬೇಕಾಗುತ್ತದೆ.

ಗೆಳೆಯ 'ಅಪ್ಪು'ವಿನ ಈ 'ಕಥನ ಕಾವ್ಯ' ನನಗೆ ಇಷ್ಟವಾದದ್ದು - ಮೇಲೆ ಚರ್ಚಿಸಲ್ಪಟ್ಟ ಎರಡೂ ಪ್ರಮುಖ ಕಾರಣಗಳಿಗಾಗಿ. ಅದರಲ್ಲಿರುವ ಸಂಕೇತ, ರೂಪಕ, ಪ್ರತಿಮೆ, ಪುರಾಣಗಳ ಸಮರ್ಥ ಬಳಕೆಗಾಗಿ ಮತ್ತು ಅದರ ಪ್ರೌಢ ಜೀವನದೃಷ್ಟಿಗಾಗಿ.

* * *

ಅಪ್ಪುವಿನ ಜೀವನದೃಷ್ಟಿಯನ್ನು ರೂಪಿಸಿರುವುದು ಮಾರ್ಕ್ಸ್‌ವಾದ. ಅಂದರೆ - ವೈಜ್ಞಾನಿಕ, ಚಾರಿತ್ರಿಕ ದ್ವಂದ್ವಮಾನ ಭೌತವಾದ. ಈ ವಾದ ಬದುಕಿನ ಎಲ್ಲ ಮಗ್ಗುಲುಗಳನ್ನು ವೈಜ್ಞಾನಿಕವಾಗಿ, ಚಾರಿತ್ರಿಕವಾಗಿ ಶೋಧಿಸಿ, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿರುವ ಕ್ರೌರ್ಯವನ್ನು ಬಯಲು ಮಾಡಿ, ಸ್ವಾತಂತ್ರ್ಯ, ಸಮಾನತೆ, ಸಹಭ್ರಾತೃತ್ವದ ಆರೋಗ್ಯಪೂರ್ಣ ಸಮಾಜದ ಸಿದ್ಧಾಂತ ಕಟ್ಟಿಕೊಡುತ್ತದೆ. ಇದು ಶ್ರೀಮಂತ ಶೋಷಕರ ಪರ ಅಲ್ಲ, ಬಡ ಶೋಷಿತ ಜನವರ್ಗದ ನೆಮ್ಮದಿಯ ಬದುಕಿಗಾಗಿ ಪ್ರಯತ್ನಿಸುವ ಜೀವನದೃಷ್ಟಿ. ಬೋಧೀವೃಕ್ಷದ ಬುಡದಲ್ಲಿ ಬುದ್ಧನಿಗೆ ಜ್ಞಾನೋದಯ ಆಗಿರಬಹುದು. ಆದರೆ ಅದು ವೈಯಕ್ತಿಕ ಮೋಕ್ಷ ಕೊಡುವ ಜ್ಞಾನೋದಯ. ಅಂಗುಲಿಮಾಲನ ಜೊತೆಗೆ ನಡೆದ ಮುಖಾಮುಖಿಯಿಂದ ಬುದ್ಧನಿಗೆ ಮತ್ತೊಂದು "ಜ್ಞಾನೋದಯ" ಆಗುತ್ತದೆ. ಈ ಕ್ರಾಂತಿಕಾರೀ ಅಂಶವನ್ನು ಅಪ್ಪು ಅವರ ಕಥನಕಾವ್ಯ ಪರಿಣಾಮಕಾರಿಯಾಗಿ ಬಯಲು ಮಾಡಿದೆ :

ಅಂಗುಲಿಮಾಲನ ಬಗ್ಗೆ ಎಲ್ಲರೂ ಹೆದರುತ್ತಿದ್ದಾಗ - ಮಹಾಕರುಣಾಮಯಿ ಬುದ್ಧ ಹೀಗೆ ಹೇಳುತ್ತಾನೆ :

'ಅವನು ಕೆರಳಿದ ಹುಲಿಯೇ ಆಗಿದ್ದರೆ
ಹುಲಿಯೇಕೆ ಕೆರಳಿದೆ ನೋಡಬೇಕು.
ಅವನು ಭುಗಿಲೆದ್ದ ಜ್ವಾಲಾಮುಖಿಯೇ ಆಗಿದ್ದರೆ
ಭೂಮಿ ಹೃದಯದಲ್ಲೇನಿದೆ ನೋಡಬೇಕು.
ಆ ಬೆರಳುಗಳ ಮಾಲೆಯಲ್ಲಿ ಅವನು ಧನ್ಯತೆ
ಪಡೆದುಕೊಳ್ಳುವುದಾದರೆ
ಅದರ ಉಗುರುಗಳ ನಂಜು ಅವನ ಯಾವ
ಗಾಯಗಳ ಕೆಣಕಿದೆ
ನೋಡಬೇಕು'.

ಹೀಗೆ ಅಂಗುಲಿಮಾಲನ ಹೊರತೋರಿಕೆಯ 'ಹಿಂಸೆ'ಗೆ ಕಾರಣ ಹುಡುಕುತ್ತಾ ಹೋಗುವ ಬುದ್ಧನಿಗೆ ಅಂಗುಲಿಮಾಲ -

'ಶಾಂತಿಯ ಗರ್ಭದೊಳಗಿರುವ ಅಶಾಂತಿಯ
ಅಶಾಂತಿಯ ಗರ್ಭದೊಳಗಿರುವ ಶಾಂತಿಯ'
ತೋರಿಸಿಕೊಡುತ್ತಾನೆ.

ಇದು ಈ ಕಥನಕಾವ್ಯದಲ್ಲಿ ವ್ಯಕ್ತವಾಗಿರುವ ಅಪ್ಪುವಿನ ಪ್ರಬುದ್ಧ ದೃಷ್ಟಿಕೋನ - ಅವರ ದೃಷ್ಟಿಕೋನವನ್ನು ಹೇಳಲು ಅಂಗುಲಿಮಾಲನ ಈ ಕತೆ ಸರ್ವಸಮರ್ಪಕವಾಗಿದೆ.

* * *

ಅಂಗುಲಿಮಾಲನ ಕತೆಗೆ ಹಲವು ಆವೃತ್ತಿಗಳಿವೆ. ಮಹಾಯಾನ ಬೌದ್ಧಮತದ ಬಲಪಂಥೀಯ ಆವೃತ್ತಿಗಳೂ ಇವೆ. ನಾನು ಓದಿರುವ ಶಿವರಾಮ ಕಾರಂತರು ಮಕ್ಕಳಿಗಾಗಿ ಬರೆದಿರುವ ಚಿತ್ರಕಥಾ ಪುಸ್ತಕವೊಂದರಲ್ಲಿ - ಬಲಪಂಥೀಯ ದೃಷ್ಟಿಕೋನವಿದೆ. "ಅಂಗುಲಿಮಾಲನ ಜನ್ಮವಾಗುವಾಗಲೇ ಜ್ಯೋತಿಷಿಗಳು ಅವನು ಮುಂದೆ ಜೀವನದಲ್ಲಿ ಹಿಂಸಾಮಾರ್ಗ ಹಿಡಿಯುತ್ತಾನೆ ಎಂದು ಭವಿಷ್ಯ ನುಡಿಯುತ್ತಾರೆ. ಮುಂದೆ ಅವನು ಗುರುಕುಲದಲ್ಲಿರುವಾಗ, ಅವನ ವಿಶೇಷ ಬುದ್ಧಿಮತ್ತೆ ಕಂಡು ಸಹಪಾಠಿಗಳು

ಹೊಟ್ಟೆಕಿಚ್ಚುಪಟ್ಟು, ಪಿತೂರಿ ಮಾಡುತ್ತಾರೆ. ಗುರುಗಳು ಅವನ ವಿರುದ್ಧ ಕೋಪಗೊಳ್ಳುವ ಹಾಗೆ ಮಾಡಿ, ಗುರುಕುಲದಿಂದ ಅವನು ಬಹಿಷ್ಕೃತವಾಗುವಂತೆ ಮಾಡುತ್ತಾರೆ. ಗುರುಕುಲದಿಂದ ಬಹಿಷ್ಕೃತವಾದ ಅಂಗುಲಿಮಾಲ, ಸಮಾಜದಿಂದಲೂ ಬಹುಷ್ಕೃತನಾಗಿ, ಅನಿವಾರ್ಯವಾಗಿ ಹಿಂಸೆಯ ಹಾದಿ ಹಿಡಿಯುತ್ತಾನೆ. ಮುಂದೆ ಬುದ್ಧ ಅವನ 'ಚಲಿಸುವ ಮನಸ್ಸ'ನ್ನು ಪವಾಡಸದೃಶವಾಗಿ ನಿಲ್ಲಿಸಿ ಸ್ಥಿರಗೊಳಿಸಿ ಬುದ್ಧಭಿಕ್ಷುವನ್ನಾಗಿಸುತ್ತಾನೆ." - ಎನ್ನುವ ಆಧ್ಯಾತ್ಮಿಕ ಆವೃತ್ತಿ ಅದು.

ಇದೇ ಕತೆಗೆ ಪ್ರಭುಶಂಕರ ಅವರು ತಮ್ಮ 'ಪ್ರೇಮ ಭಿಕ್ಷು' ಕೃತಿಯಲ್ಲಿ ಲೌಕಿಕ ಬದುಕಿನ
ದುಃಖ ದುಮ್ಮಾನ, ಬಡತನ, ಶೋಷಣೆಗಳ ವಿವರಗಳನ್ನಿತ್ತು, ವ್ಯವಸ್ಥೆಯ ಹಿಂಸೆಯತ್ತ ಬೆಳಕು ಚೆಲ್ಲಿದ್ದು ಕಂಡುಬರುತ್ತದೆ. ಇದೇ 'ಆವೃತ್ತಿ' ಅಪ್ಪುವಿನ ಈ ಕಥನಕಾವ್ಯದಲ್ಲಿ ಪರಿಣಾಮಕಾರೀ
ರೂಪಕ, ಪ್ರತಿಮೆಗಳ ಮೂಲಕ ಹೊರಹೊಮ್ಮಿದೆ.

* * *

ಅಪ್ಪು ಅವರ ಕಾವ್ಯಪ್ರತಿಭೆಯನ್ನು ಸೂಚಿಸಲು, ಕೆಲವು ಸಾಲುಗಳನ್ನು ಪರೀಕ್ಷಿಸಬಹುದು.

'ರಕ್ತ ಚೆಲ್ಲುವುದೆಂದರೆ ಅದು ರಾಕ್ಷಸರ

ಕೆಲಸ ಮಾತ್ರವಲ್ಲ

ಬದುಕ ಕತ್ತಲಲ್ಲಿ ಸುಟ್ಟ ಕರುಳಗಳೇಕೆ

ಕೈಗಳಿಗೆ ಆ ಆದೇಶ ಕೊಡಲಾರವು?'

ಮೇಲಿನ ಸಾಲುಗಳಲ್ಲಿ ರೂಪಕ ಮತ್ತು ಜೀವನದೃಷ್ಟಿ ಎಷ್ಟು ಸಮರ್ಪಕವಾಗಿ ಮಿಳನಗೊಂಡಿವೆ ನೋಡಿ!

'ಹಿಂಸೆಯೆಂದರೆ ಕ್ರೂರತನವೆಂದು ಮಾತ್ರ ಅಲ್ಲ

ಅದು ಗಾಯವಾದ ಹೃದಯದ ಬೊಬ್ಬೆ

ಯಾಕಿರಬಾರದು?'

ಹೀಗೆ ಮುಕ್ತಛಂದಸ್ಸಿನಲ್ಲಿ ಬರೆದ ಈ ಕಥನಕಾವ್ಯದಲ್ಲಿ ಆಡುಮಾತಿನ ಲಯದ ಸಮರ್ಪಕ ಬಳಕೆಯಾಗಿದೆ.

'ಇದು ನನ್ನೊಬ್ಬನ ಕಥೆಯಲ್ಲ

ಉರಿದೂ ಉರಿದೂ ಮಸಿಕೆಂಡವಾಗಿ ಹೋದ

ಹುಗಿದ ಬೂದಿಯಲ್ಲಿ ಟಪ್ಪನೆ ಊರಿಗೆಲ್ಲ ಸಿಡಿದು

ಅಗ್ನಿಜ್ವಾಲೆಯಾದ ಕೆಂಡದ ಕಥೆ'

ಇಡೀ ಕಥನಕಾವ್ಯದ ಸಂದೇಶವನ್ನು ಮೇಲಿನ ಸಾಲುಗಳು ಹೇಗೆ ಕಾವ್ಯಾತ್ಮಕವಾಗಿ ಹೇಳುತ್ತದೆ ನೋಡಿ! ಇಂಗ್ಲೀಷ್ ರೊಮ್ಯಾಂಟಿಕ್ ಕವಿ ಕೋಲರಿಜ್ ಹೇಳುವಂತೆ - ಇಲ್ಲಿ ಕಾವ್ಯದ ವಸ್ತುವೇ ಕಾವ್ಯದ ಭಾಷೆ, ಲಯ, ರೂಪಕಗಳನ್ನು ತನ್ನ ಸುತ್ತ ಹೆಣೆದುಕೊಂಡು "ಸಾವಯವ ಸಮಗ್ರೀಕರಣ ಬಲ"ವನ್ನು ಪಡೆದುಕೊಂಡಿದೆ.

* * *

ಹಿಂದೆ - ರಾಜಮಹಾರಾಜರ ಕಾಲದಲ್ಲಿ ಕಾವ್ಯ ವಂದಿಮಾಗಧರ ಬ್ರಾಹ್ಮಣರ ಕೈಗೊಂಬೆಯಾಗಿತ್ತು. ನಂತರ ಪ್ರಜಾಪ್ರಭುತ್ವದಲ್ಲೂ ಪ್ರಾರಂಭದಲ್ಲಿ ಮೇಲುಜಾತಿ, ಮೇಲು ವರ್ಗದ ಜನರ ಐಶಾರಾಮ ಜೀವನದ ಮನರಂಜನಾ ವಸ್ತುವಾಗಿತ್ತು. ನಂತರ ನಿಧಾನಕ್ಕೆ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ, ದಲಿತ ಚಳುವಳಿಗಳ ಮೂಲಕ ಜನಸಾಮಾನ್ಯರ ಸುಖ, ದುಃಖಗಳ ದನಿಯಾಗತೊಡಗಿತು. ಇತ್ತೀಚೆಗೆ ಅದು ಶೋಷಿತ ಜನರ ಅಭಿವ್ಯಕ್ತಿ ಮಾಧ್ಯಮವಾಗಿ ಬೀದಿಗಿಳಿದಿದೆ, ಕಾಡುಸೇರಿದೆ; ಕ್ರಾಂತಿಯ ಹರಿಕಾರನಾಗಿ ಹೊರಹೊಮ್ಮತೊಡಗಿದೆ. ಅಪ್ಪುವಿನ ಈ ಕಥನ ಕಾವ್ಯ ಅಂತಹ ಪ್ರಗತಿಯ ನಿದರ್ಶನ.

ಕನ್ನಡ ಕಾವ್ಯಪರಂಪರೆ ನಿಂತ ನೀರಾಗಿದೆ ಎಂದು ಹೇಳಿದವರಾರು?

'ಯಾವ ಕಾಗೆಯ ಒಡಕು ಗಂಟಲಿನ

ಕೂಗಿಗೆ ಕಿವಿಯಿಟ್ಟರೂ

ಮತ್ತೆ ಮತ್ತೆ ಕೇಳುವ ಆರ್ತನಾದದ ಕಥೆ'

-ಗಳು ಅಪ್ಪು ಅವರ ಲೇಖನಿಯಿಂದ ಪುಂಖಾನುಪುಂಖವಾಗಿ ಹೊರಬರಲಿ. ಆ ಮೂಲಕ ಎಲ್ಲ ರೀತಿಯ ಶೋಷಣೆ ಕೊನೆಗೊಂಡು 'ಸಮಸಮಾಜ'ದ ಕನಸು ನನಸಾಗಲಿ - ಎಂದು ಹಾರೈಸುತ್ತೇನೆ.

**- ಅಂತರ್ಗಾಮಿ**

‘ಏಕೆ ಗೆಳೆಯರೆ ?
ಎಲ್ಲರ ಮುಖವೂ ಕಳಾಹೀನವಾಗಿದೆಯಲ್ಲ,
ಏನಾದರೂ ಪ್ರಮಾದವಾಗಿದೆಯೆ?
ಯಾರಾದರೂ ನಿಮಗೆ ಬಯ್ದು ಅಪಮಾನ ಮಾಡಿದರೆ?
ಅಥವಾ ಎಲ್ಲರೂ ನಿಮಗೆ ಭಿಕ್ಷೆಯನ್ನು ತಿರಸ್ಕರಿಸಿದರೆ?
ನೋಡಿ, ಆನಂದನ ಮುಖವೂ ದುಗುಡ ದುಃಖಗಳಿಂದ ಕೂಡಿದೆ.
ಏನನ್ನೂ ಮುಚ್ಚಿಡಬೇಡಿ, ನೇರವಾಗಿ ಹೇಳಿ.’

ಶಿಷ್ಯವೃಂದದಿಂದ ಆನಂದ ಅಂದ
‘. . . ಏನೂ ಇಲ್ಲ ಗುರುದೇವ, ಎಲ್ಲವೂ ಎಂದಿನಂತೆಯೇ ಇದೆ . . . ’
‘ಇಲ್ಲ ಎಂದಿನಂತೆಯೇ ಇಲ್ಲ
ಮುಖವು ಮನಸ್ಸಿನ ಕನ್ನಡಿ ಎಂಬುದನ್ನು ನಾನು ಬಲ್ಲೆ
ಹಾಗೇ ಮನಸ್ಸು ಸಮಾಜದ ಮುಖ ಎಂಬುದನ್ನೂ ಕೂಡ
ಹೇಳಿ, ಕೊಳಕ್ಕೆ ಯಾವ ಕಲ್ಲು ಬಿದ್ದಿದೆ
ಯಾವ ಭಾವನೆಯ ಅಲೆಗಳನ್ನು ಅದು ಮೀಟಿದೆ.
ಹೇಳಿರಿ, ಮೀನುಗಳಂತೆ ಭಿಕ್ಷೆ ಎತ್ತಲು ಸಂಚರಿಸಿದ್ದೀರಿ ಜನಗಳ ಬಳಿಗೆ
ಯಾವ ಸಂದೇಶವನ್ನು ಹೊತ್ತು ತಂದಿದ್ದೀರಿ
ಹೃದಯದೊಳಗೆ?’
‘ಹೇಳಲಾರೆವು, ಹಾಗೆಯೇ ಹೇಳದೆ ಇರಲಾರೆವೂ ಸಹ
ಗುರುದೇವ -
ರಾಜ ಪ್ರಸೇನಜಿತ್ ಡಂಗುರ ಹೊಡೆಸಿ ಎಚ್ಚರ ಕೊಟ್ಟಿದ್ದಾನೆ
ಜನರೆಲ್ಲರೂ ಕಾವಲುಗಾರರಾಗಬೇಕಂತೆ
ಏನೇ ಆಗಲಿ ಅರಮನೆಯ ಆಸ್ತಿಯನ್ನು ಉಳಿಸಿಕೊಳ್ಳಬೇಕಂತೆ
ನಾವೂ ಸಹ ಊರು ಬಿಟ್ಟು ಹೋಗಬೇಕಂತೆ
ಇಲ್ಲಿಗೆ ನಾಳೆ ಅಂಗುಲಿಮಾಲ ದಾಳಿಯಿಡುತ್ತಿದ್ದಾನಂತೆ’
‘ಅಂಗುಲಿಮಾಲ!
ಹೆಸರು ವಿಚಿತ್ರವಾಗಿದೆಯಲ್ಲ
ಬೆರಳುಗಳ ಮಾಲೆ ಅಲಂಕರಿಸಿದೆಯೋ ಆತನ ಕೊರಳನ್ನು? ಯಾರಾತ?’
ಅಷ್ಟು ಹೊತ್ತಿಗೆ ಕುದುರೆ ಮೇಲೆ ಬಂದಿಳಿದ
ಪ್ರಸೇನಜಿತ ರಾಜ ಹೇಳಿದ
‘ಹೌದು ಭಿಕ್ಷು ಸನ್ಯಾಸಿಯೇ
ಆ ಕೊರಳ ಬೆರಳ ಮಾಲೆಗೆ
ಈ ರಾಜನ ಶಿರ ನಾಳೆ ಪದಕ ಮಾಡಿಕೊಳ್ಳಲಿದ್ದಾನಂತೆ
ನನ್ನ ಸಂಪತ್ತನ್ನೆಲ್ಲ ಆತ ಲೂಟಿ ಮಾಡಲಿದ್ದಾನೆ.

ನೀನವನ ಬಗ್ಗೆ ಇನ್ನೂ ಕೇಳದಿರುವುದೇ ಆಶ್ಚರ್ಯ.
ರಾಕ್ಷಸ!

ಜನ ಶಿರಗಳ ಮೇಲೆ ಚೆಂಡಾಡುವ ರಾಕ್ಷಸನಾತ
ಕೂಡಿಟ್ಟ ಸಂಪತ್ತನ್ನೆಲ್ಲ ಸೂರೆ ಹೊಡೆದು ಮಾಯವಾಗುವ
ಮಿಂಚು ಆತ'

ರಾಜನ ಮುಖ ಪರದೆ ಮೇಲೆ ಕಣ್ಣಿಟ್ಟ ಬುದ್ಧ.
'ನಿನಗರ್ಥವಾಗದು ಸನ್ಯಾಸಿಯೇ
ಹಿಂಸೆಯೆಂದರೇನೆಂದು ನೀನವನ ನೋಡಿ ತಿಳಿಯಬೇಕು
ದ್ರಾಕ್ಷಿ ಹಣ್ಣನ್ನು ಕುಯ್ದು ರಸ ಕುಡಿಯುವಂತೆ
ಹಿಂಸೆಯನ್ನು ಅನುಭವಿಸಿ ಆತ ಆನಂದ ಹೊಂದುತ್ತಾನೆ
ಲಿಂಬೆ ಹಣ್ಣನ್ನು ಕತ್ತರಿಸಿ ಹಾಲಿಗೆ ಹಿಂಡುವಂತೆ ಜನರ ತಲೆ ಕತ್ತರಿಸಿ
ಶಾಂತಿಗೆ ರಕ್ತವನ್ನು ಹಿಂಡುತ್ತಾನೆ.
ಅದು ಕಾಡಿನೊಳಗೆ ಅವಿತುಕೊಂಡ ನರಭಕ್ಷಕ ಹುಲಿ
ಕಾಡಿನಿಂದೀಚೆಗೆ ಬರದು ಅದು
ಬಂದರೆ ಬರೀ ಕೈಯಲ್ಲಿ ಆಚೆಗೆ ಹೋಗದು ಕೂಡ.
ಕಳ್ಳ!
ಆ ಕಳ್ಳನನ್ನು ಪರಿಹರಿಸಲು ರಾಜರಾಜರು ಸೋತರು
ಇನ್ನು ನನ್ನ ಪಾಡೇನು?
ಸೈನ್ಯ ಪಹರೆ ನಿಲ್ಲಿಸಿದ್ದೇನೆ
ಜನರಿಗೆ ರಾಜ್ಯಕ್ಕಾಗಿ ತ್ಯಾಗಕ್ಕೆ ಸಿದ್ಧರಾಗಲು ಹೇಳಿದ್ದೇನೆ.
ದಯವಿಟ್ಟು ದೇವಸಮಾನರಾದ ತಾವು
ಇಲ್ಲಿಂದ ಹೊರಟು ತಮ್ಮ ಪ್ರಾಣ ರಕ್ಷಿಸಿಕೊಳ್ಳಿ'
ಕಾಲಿಗೆ ನಮಸ್ಕರಿಸಿ ರಾಜ ಹೊರಟು ಹೋದ.

ಬುದ್ಧ
ಅಂತರಂಗಕ್ಕೆ ಬಹಿರಂಗ ಪ್ರವೇಶಿಸದಂತೆ
ಕಣ್ಣ ಬಾಗಿಲು ಹಾಕಿಕೊಂಡ
ಕ್ಷಣ ಮೌನ
ದುಗುಡಗೊಂಡ ಶಿಷ್ಯರು
ಜಗತ್ತಿನಲ್ಲೆ ಅದ್ಭುತವಾದೊಂದನ್ನು ನೋಡಲಿರುವರೊ ಎಂಬಂತೆ
ಕಣ್ಣ ಬಾಗಿಲು ತೆರೆಯಲು ಕಾದರು.

'ಹಾಗಾದರೆ ನಾನವನನ್ನು ನೋಡಬೇಕು
ನನ್ನ ಮಿತ್ರನನ್ನು ಕಾಣಬೇಕು'
'ಯಾರನ್ನು? ಯಾರನ್ನು . . . . !! ಗುರುದೇವ?'
ಎದೆ ಹತ್ತಿರ ಚೂರಿ ತಂದಂತೆ ಅವರು ಗಾಬರಿಯಾದರು

'ಹೌದು ನನ್ನ ಬಂಧು ಅಂಗುಲಿಮಾಲನನ್ನು ನಾನು ನೋಡಬೇಕು.

ಅವನು ಕೆರಳಿದ ಹುಲಿಯೇ ಆಗಿದ್ದರೆ
ಹುಲಿಯೇಕೆ ಕೆರಳಿದೆ ನೋಡಬೇಕು
ಅವನು ಭುಗಿಲೆದ್ದ ಜ್ವಾಲಾಮುಖಿಯೇ ಆಗಿದ್ದರೆ
ಭೂಮಿ ಹೃದಯದಲ್ಲೇನಿದೆ ನೋಡಬೇಕು
ಆ ಬೆರಳುಗಳ ಮಾಲೆಯಲ್ಲಿ ಅವನು ಧನ್ಯತೆ
ಪಡೆದುಕೊಳ್ಳುವುದಾದರೆ
ಅದರ ಉಗುರುಗಳ ನಂಜು ಅವನ ಯಾವ ಗಾಯಗಳ ಕೆಣಕಿದೆ
ನೋಡಬೇಕು.

'ಕೇಳಿ,
ಕಾರಣಗಳಿಲ್ಲದೆ ಪರಿಣಾಮಗಳಿಲ್ಲ,
ದ್ವೇಷ ಅಪಮಾನಗಳಿಲ್ಲದೆ ಹಿಂಸೆಯಿಲ್ಲ
ಭೂಮಿ ಹೇಗೆ ಇದೆಯೋ ನದಿ ಹಾಗೆ ಹರಿಯುತ್ತದೆ
ಮನುಷ್ಯನ ಬದುಕೂ ಕೂಡ
ಹೇಳಿ ನೀವು ಹಾವನ್ನು ಮುಟ್ಟದೆ ಹಾವು ನಿಮ್ಮನ್ನು ಕಚ್ಚುತ್ತದೆಯೇ?

'ರಕ್ತ ಚೆಲ್ಲುವುದೆಂದರೆ ಅದು ರಾಕ್ಷಸರ ಕೆಲಸ ಮಾತ್ರಾ ಅಲ್ಲ
ಬದುಕ ಕತ್ತಲಲ್ಲಿ ಸುಟ್ಟ ಕರುಳುಗಳೇಕೆ
ಕೈಗಳಿಗೆ ಆ ಆದೇಶ ಕೊಡಲಾರವು?
ಹಿಂಸೆಯೆಂದರೆ ಕ್ರೂರತನವೆಂದು ಮಾತ್ರ ಅಲ್ಲ
ಅದು ಗಾಯವಾದ ಹೃದಯದ ಬೊಬ್ಬೆ ಯಾಕಿರಬಾರದು
ದ್ವೇಷ ಗೂಡು ಮಾಡಿದ ದೇಹ
ಕೊಲ್ಲಲಿಕ್ಕೆ ಮಾತ್ರ ಅರ್ಹವಾದುದೇ?
ದ್ವೇಷದ ಕಾವಿನಿಂದಲೇ ಏಕೆ ದ್ವೇಷ ಹುಟ್ಟಿರಬಾರದು?

'ಅಂಗುಲಿಮಾಲ ನಮ್ಮಂತೆಯೇ ಮನುಷ್ಯ
ನನ್ನ ತಮ್ಮ
ಆ ತಮ್ಮನ ಕೋಮಲ ಭಾವನೆಗಳ ಚಿಗುರು ಏನಾಯಿತೋ ಕೇಳೋಣ
ಇದೇ ಕೈಗಳು ತಿರಸ್ಕರಿಸಿದ ಖಡ್ಗ
ಆ ಕೈಗಳು ಏಕೆ ಆರಿಸಿಕೊಂಡವು ಕೇಳೋಣ
ಅವನು ಯಾವ ಮನೋ ಕುದುರೆಯ ಮೇಲೆ ಹತ್ತಿದ್ದಾನೋ
ಅದರ ಖುರಪುಟದ ಸದ್ದು ನಮಗೆ ಅದರ ಹಾದಿ ಹೇಳುತ್ತದೆ
ನಾವು ತಣ್ಣಗೆ ಆಲಿಸೋಣ.
ಹಾದಿ ತಪ್ಪಿದ್ದರೆ ಭೂ ತಾಯಿಯ ಆ ಮಗ
ನುಡಿಯಲಿ ಅವನ ಅಂತರಾತ್ಮವೇ ಅದಕ್ಕೆ ಸಾಕ್ಷಿ

'ಒಂದು ವೇಳೆ ಆತ ರಾಕ್ಷಸನೇ ಆಗಿದ್ದರೆ
ಪ್ರೀತಿಯನ್ನರಸುತ್ತಾ ಬೆಳೆದ ಈ ಬಳ್ಳಿಯನ್ನು ಹೊಸಕಿ ಹಾಕಲಿ
ಶಾಂತಿ ಗುರಿಗೆ ಕಲ್ಲು ಮುಳ್ಳುಗಳ ಹಾದಿಯಲ್ಲಿನ ಪಯಣಿಗನ
ರಕ್ತವನ್ನು ಚೆಲ್ಲಿ ಬಿಡಲಿ

ನಾನು ಹೊರಟ ಹಾದಿಯೇ ತಪ್ಪಾಗಿದ್ದರೆ ಈ ಟೊಂಗೆಗಳು
ಯಾವ ಫಲ ಬಿಡಬಹುದು? ಇದ್ದೇನು ಪ್ರಯೋಜನ?'

ಬುದ್ಧ ಹೊರಟೇಬಿಟ್ಟ ನಿಧಾನ ಹೆಜ್ಜೆ ಹಾಕಿ
ರಾಕ್ಷಸನೆಂದು ಕರೆದ ಜೀವಿಯ ಕಡೆಗೆ
ರಕ್ತ ಹಚ್ಚಲ್ಪಟ್ಟ ಹೂವು ಹೃದಯವನ್ನು ತೊಳೆದು ಜಗತ್ತಿಗೆ ತೋರಿಸಲು
ತನಗೆ ತಾನೇ ಸಾಣೆ ಹಿಡಿಯಲು ಜರಡಿಯಾಡಲು
ತನ್ನನ್ನು ತಾನೇ ಗೆದ್ದುಕೊಳ್ಳಲು
ತನ್ನ ಪ್ರೀತಿಯ ದಂಡದಿಂದ ಜಗತ್ತನ್ನು ಗೆಲ್ಲಲು
ಹಾಕುತ್ತ ಹೆಜ್ಜೆ ಅತ್ತ

* * *

ನಿಶ್ಯಬ್ದ ಗೊಂಡಾರಣ್ಯದೊಳಗೆ
ಕರಿಬಂಡೆಮೇಲೆ ಕುಳಿತು ದೈತ್ಯಾಕಾರದ ಅಂಗುಲಿಮಾಲ ಬಿಕ್ಕುತ್ತಿದ್ದಾನೆ.
'ನಾನು ನನ್ನ ತಂದೆಯನ್ನು ನೋಡಬೇಕು
ನಾನು ನನ್ನ ಪ್ರೀತಿಯ ತಂದೆಯನ್ನು ಬಿಗಿದಪ್ಪಬೇಕು
ನಾಲ್ಕು ದಿನವಾದರೂ ನನ್ನ ತಂದೆಗೆ ಮೃಷ್ಟಾನ್ನ ಭೋಜನ
ಬಡಿಸಬೇಕು,
ಅವನ ಜೊತೆ ಕುಳಿತು ನನ್ನ ಅನ್ನವನ್ನು
ನನ್ನ ಭಾವನೆಗಳನ್ನು ಹಂಚಿಕೊಳ್ಳಬೇಕು
ಎಲ್ಲಿ ಸಿಕ್ಕುತ್ತಾನೆ ಅವನು
ಈ ಯಾವುದಾದರೂ ಮರವನ್ನು ಸೀಳಿದರೆ ಸಿಕ್ಕುತ್ತಾನೆಯೇ?
ಆ ಹರಿವ ಝರಿ ಹಿಡಿದು ಓಡಿದರೆ ಸಿಕ್ಕುತ್ತಾನೆಯೇ?
ಸಮುದ್ರದಾಳದಲ್ಲಾದರೂ?
ಒಲೆ ಮೇಲಿನ ಬಾಣಲೆಯಾಗಿ
ಪ್ರೀತಿಯ ಹನಿ ನೀರು ಕಾಯ್ದುಕೊಂಡಿದ್ದ
ನನ್ನ ತಂದೆ, ತಾಯಿ,
ತಂಗಿ
ಈ ದುಃಖದಾಳದಲ್ಲಿ
ನನ್ನೆದುರು ಪ್ರತ್ಯಕ್ಷವಾದರೆ . . . .
ಹೋ . . . . .
ಮನುಷ್ಯನ ಪ್ರೀತಿಗೆಷ್ಟು ಬೆಲೆ
ಅವನ ಬಂಧುತ್ವವೆಷ್ಟು ವಿಶಾಲ - ಆಕಾಶದಷ್ಟು.
ಹಾ, ಅಯ್ಯೋ ನಾನು ಕಳೆದುಕೊಂಡೆ
ಪ್ರಪಂಚದ ಕ್ರೂರ ಬಾಹುಗಳ ಹಿಡಿತದಲ್ಲಿ
ನಾನು ನನ್ನ ಬದುಕನ್ನು ಕಳೆದುಕೊಂಡೆ,
ಎಲ್ಲಿ ದೊರಕೀತು ಅದು
ಇನ್ನೆಷ್ಟು ಜನ ನತದೃಷ್ಟರು ನನ್ನ ಜೊತೆಗೆ
ಶಂಕರಾ, ಇನ್ನೆಷ್ಟು ಕಾಲ ಬದುಕುಗಳು
ಹೀಗೆ ಮುರುಟಿ ಹೋಗುತ್ತಿರುತ್ತವೆ?'

‘ಗೆಳೆಯನೇ,
ಅರಸುಗಳ ಎದೆ ನಡುಗಿಸುವವನು ನೀನು
ಯಾರಿಗೂ ಹೆದರದವನು ನೀನು
ಸಂಪತ್ತಿನ ಮುಂದೆ ಬಂಧುತ್ವವನ್ನೆಲ್ಲ ಅರಿಯದ
ರಾಕ್ಷಸರ ಬೆಂಕಿ ಮನಸ್ಸಿನಲ್ಲಿ
ನಿನ್ನ ತಂದೆ ಮುರುಟಿ ಹೋದರು
ಆದರೆ ನಾನಾದರೂ ಏನು?
ನಿನ್ನನ್ನು ಜೊತೆಗೂಡಿದ ಈ ನೂರೊಂದು ಗೆಳೆಯರ
ಬದುಕಾದರೂ ಏನು?
ಇವರೆಲ್ಲರ ಬದುಕ ಕುದುರೆಗಳು
ಯಾರದೋ ಬಂಡಿ ಎಳೆದೂ ಎಳೆದೂ
ಚಕ್ರದಡಿ ಸಿಲುಕಿ ಹೋದವು ಹುಲ್ಲಿಲ್ಲದೆ, ನೀರಿಲ್ಲದೆ.
ನಮಗಾರು ಭರವಸೆ ಕೊಡುತ್ತಾರೆ ಹೇಳು?
ನಮಗೆ ನಾವೇ ಭರವಸೆ
ನಮಗೆ ನಾವೇ ಶಕ್ತಿ
ಭರವಸೆಯಿಲ್ಲದಿದ್ದವರೇ ಇಲ್ಲಿ ಬಂದು ಸೇರಿದ್ದೇವೆ
ನಾಳೆ ಸಹ ಸೇರುತ್ತಾರೆ, ಇನ್ನು ಕೂಡ -
ಅದೇ ನಮಗೆ ಭವಿಷ್ಯ’

‘ಹೌದು ಮನುಷ್ಯನೊಳಗೆ ಇನ್ನೊಬ್ಬರನ್ನು ಸುಡುವ
ಬೆಂಕಿಯನ್ನು ಆರಿಸಬೇಕು
ರಾಜಾ ಪ್ರಸೇನಜಿತ್,
ಬಹಳ ದೊಡ್ಡ ಖಜಾನೆಯಿದೆ ನಿನಗೆ
ಜನರ ಹೃದಯ ಬಂಗಾರದ ಹಣ ಅಲ್ಲಿದೆ
ಅದು ನಿನಗೆ ಸೇರಿದ್ದಲ್ಲ
ಆದರೆ ಯಾವ ಜನರೂ ಅದನ್ನು ಪ್ರಶ್ನಿಸಲಾರರು
ನಿನ್ನ ಅಧಿಕಾರದ ಕತ್ತಿ
ಅವರ ಎದೆಗೆ ಚುಚ್ಚಿ ಹಿಡಿದಿದ್ದೀಯೆ,
ಆದರೆ ಈ ಅಂಗುಲಿಮಾಲನ ಪರಿವಾರ
ಅದೆಲ್ಲ ಭಯವನ್ನೂ ಮೀರಿದೆ
ತಮ್ಮ ಬಂಧುಗಳ ಬದುಕ ಬಂಗಾರವನ್ನು
ಕಳೆದುಕೊಂಡ ಇದಕ್ಕೆ ಭಯವಿಲ್ಲ.

ನಿನ್ನ ಆಸೆಯ ಬೆಂಕಿ
ನನ್ನ ಜನರನ್ನೆಲ್ಲ ಸುಟ್ಟಾದ ಮೇಲಾದರೂ ಕೂಡ
ನಿನ್ನನ್ನು ಸುಡುತ್ತದೆ.
ಅದೇ ಅಂಗುಲಿಮಾಲನ ಗುರಿ.
ಬೆಂಕಿ ಕೋಮಲ ಹೂವುಗಳನ್ನು ಸುಡಬಲ್ಲದು
ಆದರೆ ಬೆಂಕಿಯ ಮೂಲಕ್ಕೆದುರಾಗಿ

ಸುಟ್ಟ ಬಯಕೆಗಳೇ ಭಗ್ಗೆಂದು ಭುಗಿಲೆದ್ದರೆ?'

*           *           *

ಬುದ್ಧ ಮನಸ್ಸು ಮಜ್ಜಿಗೆಯನ್ನು
ಕಡೆಯುತ್ತಾ ಹೊರಟ.
ನಾನರಸುತ್ತಿರುವ ಶಾಂತಿ ನಡುಗುತ್ತಿದೆಯೇ?
ನಾನು ಕೂಗುತ್ತಿರುವ ಅಹಿಂಸೆ
ಅರಣ್ಯರೋದನವಾಗುತ್ತಿದೆಯೇ?
ಅಥವಾ ಈ ರಕ್ತ ಅಲೆಗಳೊಳಗೇನಾದರೂ
ಶಾಂತಿಯಿದೆಯೇ?
ಗುಡುಗುಗಳು ಮಳೆ ಮೊಳಕೆಯೊಳಗೊಂಡಂತೆ
ಅಥವಾ ಈ ಶಾಂತಿಯೊಳಗೇನಾದರೂ ರೋದನವಿದೆಯೇ?
ಒಳಗೊಳಗೆ ಹಣ್ಣು ಕೊಳೆತಂತೆ
ಜನಮೌನದಲ್ಲೇನಾದರೂ ತಳಮಳವಿದೆಯೇ?

ಆಸೆಯೇ ದುಃಖಕ್ಕೆ ಮೂಲ
ಆದರೆ ಮೂಲ ಯಾವುದು ಆಸೆಗೆ?
ಕೊನೆ ಯಾವುದು ದುಃಖಕ್ಕೆ
ಆಸೆ ದುಃಖಗಳ ನಡುವೆ ಸಂತೋಷದ ಮೂಲ ಯಾವುದು
ಮನುಷ್ಯಜನ್ಮದ ಚಲನೆ ಯಾವುದು?
ಮನುಷ್ಯಜನ್ಮದ ದಿಕ್ಕು ಯಾವುದು?
ಅಂಗುಲಿಮಾಲನನ್ನು ನೋಡಬೇಕೆಂಬುದು ಆಸೆಯಲ್ಲವೆ?
ಶಾಂತಿಯನ್ನು ಕಾಣಬೇಕೆಂಬುದು ಆಸೆಯಲ್ಲವೆ?
ಮುಕ್ತಿ ಆಸೆಯಲ್ಲವೆ? ನಿರ್ವಾಣ ಆಸೆಯಲ್ಲವೆ?
ಆಸೆಯೆಂಬುದು ಸ್ಥಾಯಿಯಾದಾಗ
ನಿರಾಸೆಯೇನು? ದುಃಖವೇನು
ಹಿಂಸೆಯೇನು? ಶಾಂತಿಯೇನು?

ಇದೆಲ್ಲ ಮೀರಿ ಮನುಷ್ಯ ಬದುಕಬೇಕಾದರೆ
ಕೊಳದ ಕೆಸರಿನಿಂದ ಅಲೆಗಳೇಳುತ್ತವೆಯೇ ಅಥವಾ
ಕೊಳದಿಂದ ಜೀವಿಯೊಂದು ಕಾಡಿಗೆ ನೆಗೆಯುತ್ತದೆಯೇ
ಹಾಗಾದರೆ ನಾನು ಮಾಡಬೇಕಾದುದೇನು?

ಅಂಗುಲಿಮಾಲ ನೀನು ಏನು?
ಆಸೆ ಮರೀಚಿಕೆಯ ಬೆನ್ನಿಗೆ ಬಿದ್ದ ಮಹಾತ್ವಾಕಾಂಕ್ಷಿ ರಾಕ್ಷಸನೋ
ಅಥವಾ ರಾಕ್ಷಸರ ಹುರಿವ ಬಾಣಲೆಯಿಂದ ಹಾರಿದ ಅಗ್ನಿಗೋಲವೋ
ಬುದ್ಧ ಹೆಜ್ಜೆಯಿಟ್ಟ ಇನ್ನಷ್ಟು
ಅಂಗುಲಿಮಾಲನ ಬಳಿಗೆ
ಅಂಗುಲಿಮಾಲನ ಎದುರು ನಿಂತ.
ಸುತ್ತ ಕೊತ್ತಲಗಳನ್ನಿಟ್ಟುಕೊಂಡ ಅಂಗುಲಿಮಾಲ ಕಿರುಚಿದ

‘ಯಾರದು? ರಾಜ ಪ್ರಸೇನಜಿತ್ ಕಳಿಸಿದ ಗೂಢಚಾರಿಯೇ
ಬದುಕುವ ಆಸೆಯಿಟ್ಟುಕೊಂಡು ಬಂದಿರುವೆಯೇ?
ಏನು ಬೇಕಾಗಿದೆ?’
ತತ್ತರಿಸದ ಬುದ್ಧ ಉತ್ತರಿಸಿದ
‘ನಾನು ಹುಲಿ ಬಾಯಿಗೆ ಬಂದ ಬಲಿ
ಮಾನವೀಯತೆ ಲೋಕದ ಗೂಢಚಾರ
ರಕ್ತ ಬಾವಿಯೊಳಾತ್ಮದೊಳಗೆ ಬಿಟ್ಟ ಪಾತಾಳ ಗರುಡ
ಬದುಕುವಾಸೆಯಿಟ್ಟುಕೊಂಡು ಸಮುದ್ರದಲ್ಲಿ
ರತ್ನಕ್ಕಾಗಿ ಮುಳುಗಲಿಲ್ಲ
ಸಾಯುವಾಸೆಯಿಂದಲೂ ಹುಲಿಯೊಳಗೆ
ಹಸುವನ್ನು ತಡವುತ್ತಿಲ್ಲ
ನನಗೆ ಬೇಕಾಗಿರುವುದು ಕತ್ತಲೆಗೆ ಬೆಳಕಾಗಿದೆ
ನಿನ್ನ ದೇಹದ ಹೃದಯದ ಗುಹೆಯೊಳಗೆಲ್ಲೋ ಅಡಗಿದೆ’.
‘ನಿನ್ನ ತಲೆ ಹರಟೆ ಸಾಕು
ನಿಲ್ಲು ಅಲ್ಲೇ’
‘ನಾನು ನಿಂತೇ ಇದ್ದೇನೆ
ನಿಲ್ಲಬೇಕಾಗಿರುವುದು ನೀನು’
‘ಏ ಕಪಟ ಸನ್ಯಾಸಿ, ನಾನು ಯಾರು ಗೊತ್ತೇ?’
‘ನೀನು ಯಾರೆಂದು ಗೊತ್ತಾಗಬೇಕಾಗಿರುವುದು ನನಗಲ್ಲ
ನಿನಗೇ,
ನಿನ್ನ ಅಂತರಂಗಕ್ಕೆ ನಿನ್ನ ಬಹಿರಂಗ ಗೊತ್ತಾಗಬೇಕು
ನಿನ್ನ ಬಹಿರಂಗಕ್ಕೆ ನಿನ್ನ ಅಂತರಂಗ ಗೊತ್ತಾಗಬೇಕು’
‘ಹೆಚ್ಚು ಮಾತನಾಡಿದರೆ
ನಿನ್ನನ್ನು ಈ ಖಡ್ಗದಿಂದ ಕೊಲ್ಲುತ್ತೇನೆ’
‘ಇಗೋ ನೀನು ಇಚ್ಛೆಪಡುವುದಾದರೆ ಕೊಲ್ಲು’
ಅಂಗುಲಿಮಾಲ ದಿಗ್ಭ್ರಾಂತನಾದ
ಆಪ್ತ ಸ್ನೇಹಿತನಂತೆ ಕೈಗಳು ನಡುಗಿದವು
ಕಣ್ಣುಗಳಲ್ಲೇನೋ ಸಂದೇಶವಿದೆ
ಮಾತುಗಳಲ್ಲೇನೋ ನಿರ್ಧಾರವಿದೆ
ಸಾಯಲು ಬಂದಿಲ್ಲ ಆತ
ಯಾಕೆ ಬಂದಿರಬಹುದು, ಯಾರಿರಬಹುದು?

‘ಬಾ ಸನ್ಯಾಸಿಯೇ, ಹೇಳು
ಇದೇ ಮೊದಲ ಬಾರಿಗೆ ನನ್ನ ಕೈಗಳು ನಡುಗುತ್ತಿವೆ
ನೀನಾರು ನೀನೇಕೆ ಬಂದೆ?
ನನ್ನ ಹೃದಯದೊಳಗೇನೋ ಮೊರೆತ ಉಂಟಾಗಿದೆ.

ನನ್ನ ಆತ್ಮಕ್ಕಾವುದೋ ಸ್ಥೈರ್ಯ ಬಂದಿದೆ'
'ಮಗುವೆ, ನಿನ್ನನ್ನು ಕಾಣಲೆಂದೇ ಬಂದೆ'.
'ನಾನು ಮಗುವೆ? ಹೊಸದಾಗಿದೆಯಲ್ಲ,
ನಿನ್ನ ಮಾತುಗಳೊಳಗೇನೋ ಅವ್ಯಕ್ತ ಬಂಧುತ್ವವಿದೆ'
'ಇಲ್ಲ ನಿನ್ನೊಳೊಬ್ಬ ಹೊಸ ಮನುಷ್ಯನಿದ್ದಾನೆ
ಇಲ್ಲವೆ ಹಳೆಯದಾದೊಂದು ಮಗುವಿದೆ'

'ಹೊಸ ಮನುಷ್ಯನೇ? ಅದು ಬೇರೆ ಸಾಧ್ಯವೇ?'

'ಯಾಕಿಲ್ಲ
ಸಂದರ್ಭ ಮನುಷ್ಯನೊಳಗಿನ ಒಂದು ಮನಸ್ಸಿಗೆ
ಗೋರಿ ಕಟ್ಟಿ ಮತ್ತೊಂದಕ್ಕೆ ನೀರೆರೆಯಲಾರದೆ?'
ಅಂಗುಲಿಮಾಲ ಸ್ವಲ್ಪ ಯೋಚಿಸಿದ
'ಗೊತ್ತಿಲ್ಲ, ಆದರೆ ಇದು ನನಗೆಲ್ಲೋ ತಾಗುತ್ತಿದೆ.
ನೀನು ನನ್ನ ನೆನಪುಗಳ ಅಲೆಗಳನ್ನೆಬ್ಬಿಸುತ್ತಿದ್ದಿ.'
'ನನಗೆ ಗೊತ್ತು ನಿನ್ನ ನೆನಪುಗಳೊಳಗೆಲ್ಲೋ ಗಾಯಗಳಿವೆ
ನಾನು ಗಾಯಗಳಿಲ್ಲದ ನೆನಪುಗಳನ್ನು ಮನುಷ್ಯ ಕಟ್ಟಿಕೊಳ್ಳಲು
ನೆರವಾಗಬೇಕು'
'ಹೌದು, ಅದು ಹೇಗೆ ಸಾಧ್ಯ?'
'ಸಾಧ್ಯ'
'ನೀವು ಯಾರೋ ನನ್ನ ಆಪ್ತ ಸ್ನೇಹಿತರಂತೆ ತೋರುತ್ತೀರಿ
ಇಲ್ಲಿಯೇ ಕುಳ್ಳಿರಿಸಿದೆನಲ್ಲಾ,
ಒಳಗೆ ಗುಹೆಯೊಳಗೆ ಬನ್ನಿ'

* * *

ಬುದ್ಧನ ಕತೆ ಕೇಳಲು ಹೋಗಿ
ತನ್ನ ಕಥೆ ಹೇಳಲಿಕ್ಕೆ ಸಿಕ್ಕಿಕೊಂಡ ಅಂಗುಲಿಮಾಲ
ಸುತ್ತ ತನ್ನ ಜೊತೆಗಾರ ನೂರೊಂದು ಜನ,
ಪೀಠದಲ್ಲಿ ಬುದ್ಧ
ಅಂಗುಲಿಮಾಲ ಹೇಳಿದ
'ಕೇಳು ಬುದ್ಧ . . .
ಪ್ರಾಪ್ತ . . . . ನನ್ನ ಹೆಸರು ಪ್ರಾಪ್ತ
ನನ್ನನ್ನು ನಾನೇ ಮರುಹುಟ್ಟಿಸಿಕೊಂಡ
ನಿರಂತರ ಕತ್ತಲ ಗರ್ಭದೊಳಗೆ ಗುದ್ದಾಡುತ್ತಿದ್ದ ದುಃಖತಪ್ತ

'ತೆರೆದುಕೊಳ್ಳಬೇಕಾದ ದಾರಿಗಳು ಈಟಿಗಳಾಗಿ ತಿವಿದಾಗ
ಕರಗಿ ಭರವಸೆ ಕಣ್ಣೀರಾದಾಗ
ಆಸೆಗಳು ಹಬೆಯಾಡುತ್ತಿದ್ದ ಹೃದಯ ಹೆಬ್ಬಂಡೆಯಾಗುತ್ತದೆ
ಹೌದು ಬುದ್ಧದೇವ, ಮಾನವ ಈಗಷ್ಟೇ ಹುಟ್ಟಿದ

ಹುಟ್ಟಿ ಅಂಬೆಗಾಲಿಡುವಾಗಲೇ
ಬಂಧಿಸಲ್ಪಟ್ಟ

ಆತ ತನ್ನ ಅಂತಃಕರಣವನ್ನು ಚಿಗುರಿಸಿಕೊಳ್ಳುತ್ತಿದ್ದಾಗಲೇ
ಭೂಮಿ ಚಿಮ್ಮಿದ ನೀರಿನ ಚಿಲುಮೆಗೆ
ತಮ್ಮ ಅಂಕಿತ ಒತ್ತಿ ಪಹರೆ ಇಟ್ಟರು.
ಆಸೆಯ ಸಂಗಡ ಬದುಕಿ ನಾವು
ನಿರಾಸೆಯ ಹಾಡಿನೊಂದಿಗೆ ಸಾಯುತ್ತೇವೆ.
ಆಗಲೂ ಹೊಸ ನೀರಿನ ಕಣಗಳು ಹುಟ್ಟಿ ಹರಿಯುತ್ತಲೇ ಇರುತ್ತವೆ
ಕೊನೆ ಮುಟ್ಟುವ ಆತುರದಿಂದ
ನಾನು ಹೇಳುತ್ತೇನೆ ಇದರೊಳಗಿನ ನನ್ನ
ಕಥೆಯನ್ನು
ಸಿಂಹದ ಮರಿಯನ್ನು ಬಡಿದೂ ಬಡಿದೂ
ಕಣ್ಣೀರ ಗುಡಿಸಲಿನೊಳಗೆ
ಉಪವಾಸ ಕೆಡವಿದ ಸಮಾಜದ ಕಥೆಯನ್ನು

'ಇದು ನನ್ನೊಬ್ಬನ ಕಥೆಯಲ್ಲ
ಉರಿದೂ ಉರಿದೂ ಮಸಿಕೆಂಡವಾಗಿ ಹೋದ
ಹುಗಿದ ಬೂದಿಯಲ್ಲಿ ಟಪ್ಪನೆ ಊರಿಗೆಲ್ಲ ಸಿಡಿದು
ಅಗ್ನಿಜ್ವಾಲೆಯಾದ ಕೆಂಡದ ಕಥೆ
ಯಾವ ಊರಿನ ಮೇಲಿಂದ ಬೀಸುವ ಗಾಳಿಯ ನಾಡಿ ಹಿಡಿದರೂ
ಮೆಲ್ಲನೆ ಉಸುರುವ ಶೋಕಗೀತೆಯ ಕಥೆ

'ಯಾವ ಕಾಗೆಯ ಒಡಕು ಗಂಟಲಿನ
ಕೂಗಿಗೆ ಕಿವಿಯಿಟ್ಟರೂ
ಮತ್ತೆ ಮತ್ತೆ ಕೇಳುವ ಆರ್ತನಾದದ ಕಥೆ.

'ಪ್ರಾಪ್ತ, ಪ್ರಾಪ್ತ ಎಂದು ಕ್ಷೀಣ ಸ್ವರದಲ್ಲಿ
ಪ್ರೀತಿಯಿಂದ ಕರೆಯುತ್ತಿದ್ದ ಅಪ್ಪ
ಮನೆ, ಊರ ಒಡೆಯರ ಬಿಸಿಲ ಹೊಲ
ಇನ್ನೇನೂ ಅರಿಯದ ಅವ್ವ,
ಅಣ್ಣ . . . . ಅಣ್ಣ . . . . ಎಂದು ಒಂದು ದಿನವೂ ನನ್ನೊಂದಿಗೆ ಆಟವಾಡದ
ಅಮ್ಮನ ಬೆನ್ನಿಗೇರಿ ಬಿಸಿಲ ದೃಷ್ಟಿಗೆ ಸಿಲುಕಿ
ಬರಡು ಮಣ್ಣಲ್ಲಿ ಹೊಳಕುತ್ತಾ ಹೊಳಕುತ್ತಾ ಬೆಳೆದ ತಂಗಿ

'ಸಂಸಾರವೆಂದರೆ ಶಾಲೆ
ಸಂಸಾರವೆಂದರೆ ನೆಮ್ಮದಿಯ ನೆಲೆ
ಸಂಸಾರವೆಂದರೆ ಗಿಡದ ಬೆಳೆದ ಟೊಂಗೆಗಳೆಲ್ಲ
ವಿಸ್ತಾರವಾಗಿ ಹರಡಿ ಹಬ್ಬಿಕೊಳ್ಳಬೇಕಾದ ನೆಲ

‘ಹ್ಹ ಹ್ಹ ಹ್ಹಾ,
ಸಂಸಾರವೆಂದರೆ ಹೊರೆ ಹೊರುವ ಕತ್ತೆಗೆ
ಕೊಳಕು ಕೊಳ್ಳದ ಬಳಿ
ನೀರು ಕುಡಿಯಲು ನಿಲ್ಲಿಸಿದ ಜಾಗ

‘ಸಂಸಾರವೆಂದರೆ ಒಡೆಯನ ಹಿತ್ತಲಲ್ಲಿ
ಮೊಟ್ಟೆ ಚಿಪ್ಪೊಡೆದು ಬರುವವರೆಗೆ
ಕೋಳಿ ಕಾವು ಕೊಡಲು ಮಾಡಿಟ್ಟ ಗೂಡು

‘ಸಂಸಾರವೆಂದರೆ ಒಡೆಯನ ನಾಯಿ ಮಲಗುವ ಜಾಗ
ಪ್ರೀತಿ ಮಾತುಗಳ ಚೆಂಡಾಟವಾಡಲು ಹೋದಾಗ
ಕೆಸರು ಮುದ್ದೆಯಾಗಿ ಧೊಪ್ಪೆಂದು ಉದುರಿ ಮುಖಕ್ಕೆ ರಾಚುವ ಚಿಂತೆಯ ಜನಕ
ಕನಸುಗಳೆಲ್ಲ ಗೋಡೆಗೆ ತಾಗಿದ ಗಾಜಿನ ಹುಳುಗಳು

‘ಬುದ್ಧದೇವ
ಇಲ್ಲೇ ನಾನು ಬೆಳೆದೆ
ತಪತಿ ದಿನವೂ ಈ ನೆಲದಲ್ಲಿ ಹರಿದಳು
ಊರ ಗೊಡವೆಯೇ ಬೇಡದಂತೆ
ತನಗೆ ತಾನೇ ಏಕಾಂಗಿಯಾಗಿ

‘ಇಲ್ಲಿ ಹಕ್ಕಿಗಳು ಕೂಗುತ್ತಿವೆಯಲ್ಲ ಈ ಬನದಲ್ಲಿ
ಹಾಗೇ ಆಗಲೂ ಕೂಗಿರಬಹುದು ಆ ಕಾಡಲ್ಲಿ
ಬೆಳಿಗ್ಗೆ ಕಾಗೆ ಮಾತ್ರ ಕೂಗುತ್ತಿದ್ದವು ಜಾವದಲ್ಲೇ
ಕೋಳಿಯೊಂದಿಗೆ
ನಿಷ್ಕರುಣವಾಗಿ, ಗೊತ್ತು
ಅದು ನಮ್ಮಪ್ಪ ದುಃಸ್ವಪ್ನ ಕಂಡಂತೆ ಎದ್ದು ಕೂರುವ ಹೊತ್ತು
ಅವ್ವ ಕರುಳನ್ನು ಹಿಚುಕಿಕೊಂಡು ನನ್ನನ್ನೂ ತಂಗಿಯನ್ನೂ
‘ಏಳು ಕಂದ ಏಳು ಕಂದ’ ಎಂದು ಎಬ್ಬಿಸುವ ಹೊತ್ತು
ಮಣ್ಣಲ್ಲಿ ಅದ್ದಿಟ್ಟ ಧೋತರ ತಲೆಗೆ ಕಟ್ಟಿ
ಬದುಕು ಬೇಗ ಸವೆದು ಹೋಗಲಿ ಎಂದು ಬೇಡಿಕೊಳ್ಳುತ್ತಾ
ಕರಕರಾ ಎಂದು ಅಪ್ಪ ಕತ್ತಿ ಮಸೆವ ಹೊತ್ತು

ಒಲೆ ಉರಿ ಬೇಗೆಗೆ ಕಣ್ಣುಜ್ಜಿಕೊಳ್ಳುತ್ತಾ
ಗಡಿಗೆಯಲ್ಲಿ ಸೌಟು ಹಾಕಿ ತಿರುಗಿಸಿ ಗಡಿಬಿಡಿಯಲ್ಲಿ
ನಾಲ್ಕು ಗಂಜಿ ಕಾಳಿಗಾಗಿ ಹುಡುಕಿ ತಿಳಿಯಲ್ಲಿ
ಬೆಂದಿರಬಹುದೇ ಎಂದು ಅವ್ವ ಒತ್ತಿ ನೋಡುವ ಹೊತ್ತು

‘ಸೊರಗಿ ಬಂದು ಇನ್ನೇನು ಬೀಳುತ್ತಾನೋ ಎಂಬಂತೆ
ಸೊಂಟಕ್ಕೆ ಕೈಕೊಟ್ಟು ನಿಂತಿರುತ್ತಿದ್ದ
ಅಪ್ಪನಿಗೆರಡು ಗರಟ
ದಷ್ಟಪುಷ್ಟವಾಗಿ ಬೆಳೆಯುತ್ತಿದ್ದ ಅಮ್ಮನ ಈ ಮುದ್ದು ಮಗನಿಗೆ
ಮೂರು ಗರಟ
ಉಳಿದದ್ದು ತಂಗಿಗೆ ಬಗ್ಗಿಸಿ
ಕಣ್ಣೀರ ಉಪ್ಪು ನೆಕ್ಕುತ್ತಾ ಅವ್ವ ಗಡಿಗೆ ತೊಳೆಯುವ ಹೊತ್ತು
‘ಮುಪ್ಪಿನ ದೊಣ್ಣೆಯೇಟು ತಿಂದ ಹಾವು
ಮರಿಗಳೆದುರಿಗೆ ವಿಲಿಗುಡುತ್ತದೆ
ಕುದಿವ ನೀರಲ್ಲಿ ಕಾಲುಕಟ್ಟಿದ ಜೀವ ಬದುಕ ಪ್ರೀತಿಸುತ್ತದೆ
ಆಳ ನಿಟ್ಟುಸಿರುಗಳ ಉರಿವ ಕಟ್ಟಿಗೆಯ ಹೊಗೆ
ಸಹಿ ಮಾಡದೆ ಗಾಳಿಯಲ್ಲಿ ಅಳಿಸಿಹೋಗುತ್ತದೆ
ಆ ನನ್ನಪ್ಪ ತನಗಿಂತ ಉದ್ದ - ದಾರಿಯುದ್ದ ಹೋಗಿದ್ದ
ತನ್ನ ನೆರಳನ್ನು ತಾನೇ ಹಿಂಬಾಲಿಸುತ್ತಾ
ಹೊಲದತ್ತ ಬೇಗ ಬೇಗ ಹೆಜ್ಜೆ ಹಾಕುತ್ತಿದ್ದ
ಹೆಗಲ ಮೇಲೆ ಕುಳಿತಿದ್ದ ನನಗೆ ಅನ್ನುತ್ತಿದ್ದ
ದೇಹ ನಂದಲ್ಲ, ಕರುಣಾಹೀನ ಪರಮಾತ್ಮನದ್ದು
ನೆರಳು ಮಾತ್ರಾ ನಂದು
ನೆರಳಿಗೆ ದೇಹದ ಬಣ್ಣ ಇಲ್ಲ. ನನ್ನ ಬದುಕ ಬಣ್ಣ ಮಾತ್ರಾ
ದೇಹದ ಕಾಲಕೆಳಗಿಂದ ತಪ್ಪಿಸಿಕೊಳ್ಳಲು
ವ್ಯರ್ಥ ಹಾರುವುದಿಲ್ಲ ಮಗು
ದಿನ ಮತ್ತೆ ಮತ್ತೆ ಅದೇ ಪುನರಾವರ್ತನೆಯ ಜೀವನ
ಕುಂಡೆ ನೋಯುತ್ತಿದೆಯಾ ಮಗು ಕೂತು
ಕೂರುತ್ತೀಯಾ ಕೆಳಗೆ ಸೊಂಟದಲ್ಲಿ ಸ್ವಲ್ಪ ಹೊತ್ತು?

‘ನಾನು ಚೂಟಿ ಹುಡುಗ

‘ಹಾ! ಅಪ್ಪ!! ಮಂಗ . . . . ಮಂಗ!
ನೆಗೆದು ಕೂತ ಹೊಡೆತಕ್ಕೆ ಅಪ್ಪ ಬವಳಿಸುತ್ತಿದ್ದ
ಮತ್ತೆ ಹೋಗಿ ಹೊಲದಲ್ಲಿ ಬೆವರು ಬಸಿಯುತ್ತಿದ್ದ.

‘ಒಂದು ದಿನ
ಅಪ್ಪ ಮಲಗಿದ್ದ
ಕಾಲುಗಳು ನಡೆಯಲಾರದ್ದಕ್ಕೆ
ಬೆಂಕಿ ಮೇಲಿಟ್ಟ ನೀರಿಲ್ಲದ ಮಡಕೆಯಂತೆ
ದೇಹ ಬಿಸಿಯಾಗಿದ್ದಕ್ಕೆ
ಮುಚ್ಚಿಕೊಳ್ಳುತ್ತಿದ್ದ ಕಣ್ಣು ರೆಪ್ಪೆಗಳನ್ನು
ಎಳೆದು ನಿಲ್ಲಿಸಲು ಪ್ರಯತ್ನಿಸುತ್ತಿದ್ದ
ಇಷ್ಟು ದಿನ ತಾನು ಪ್ರೀತಿಸಿ ಜೀವ ತುಂಬಿದ ವಸ್ತುಗಳಲ್ಲಿ

ಯಾವುದಾದರೂ ಮರುಗಿ ಮುತ್ತಿಕ್ಕಬಹುದೆಂದು
ಗುಳಿಬಿದ್ದ ಕಣ್ಣು ಮತ್ತು ಕೆನ್ನೆಗಳ ಸುಕ್ಕು ಚರ್ಮಕ್ಕೆ
ಕಡೇ ಪಕ್ಷ
ಇಷ್ಟು ದಿನ ಹೊರತೆಗೆಯಲು ಕಲ್ಲು ಬಂಡೆಯ ನಡುವೆ
ಒಂದು ಕಿಂಡಿ ಸಹ ಸಿಗದೆ,
ಹೃದಯದಲ್ಲಿ ರಕ್ಷಿಸಿಟ್ಟು ಒಣದ್ರಾಕ್ಷಿಯಾಗಿರಬಹುದಾದ
ತನ್ನೆಲ್ಲ ಮಮತೆಯನ್ನು, ಮರುಕವನ್ನು
ಮಂಜಿನಂತೆ ಚೆಲ್ಲಿಬಿಡಬಹುದಾದ
ನನ್ನ ತಾಯಿಗಾಗಿ, ಬ್ರಹ್ಮಾಂಡ ನಿರೀಕ್ಷೆಯಿಂದ

(ಅಮ್ಮ, ನಿನ್ನನ್ನಾಗ ಬಿಸಿಲು ಸುಡುತ್ತಿತ್ತು
ಸಿಂಹಕ್ಕೆ ಮಾಂಸ ಎಳೆದು ತರುತ್ತಿದ್ದ
ಬಡಕಲು ಮೊಲವಾಗಿದ್ದಿ - ನೀನು)

'ಅಪ್ಪ ಇಷ್ಟೇ ಅಂದ ನನಗೆ
ಹೇಳು ಯಜಮಾನನಿಗೆ,
ಈ ಹುಳು ಹೊರಳುತ್ತಿಲ್ಲ,
ಮತ್ತೆ ನಾಳೆ ಬಂದು ದುಡಿಯುತ್ತದೆ.

'ಆಗ ಬಂದ ಅಮ್ಮ ಅಂದಳು
ಕುತ್ತಿಗೆಯ ಬಿಸಿ ನೋಡುತ್ತಾ -
ಮೈ ಅಲ್ಲಾಡುವವರೆಗೆ ಒದ್ದಾಡುತ್ತೀರಿ ಹೊಲದಲ್ಲಿ
ಊಟವನ್ನು, ಕುಡಿಯಲು ನೀರನ್ನೂ ಕೇಳದೆ
ಮೂಕ ಪ್ರಾಣಿಯಂತೆ ವಿನೀತವಾಗಿ
ನಿಮ್ಮದಲ್ಲವೆನ್ನುವಂತೆ ಈ ದೇಹ -
ಒಡೆಯ ಮೂಗುದಾರ ಹಾಕಿರುವ ಎತ್ತಿನಂತೆ

'ಕೊನೇ ಮಾತೆಂಬಂತೆ ಅಪ್ಪ ಎಂದ
'ಹೋ . . . . ಹೋಗು ಮಗು
ಹೇ . . . . ಹೇಳು ಒಡೆಯನಿಗೆ
ಅವಳದ್ದು ಯಾವಾಗಲೂ ಹೀಗೆಯೇ
ತಂದ ಸಾಲ ತೀರಿಸಲಿಕ್ಕಾಗದಿದ್ದರೂ
ಸಾಯುವವರೆಗೆ ಋಣ ತೀರಿಸುವಾ.
ಅಲ್ಲದೆ ಅನ್ನಬಹುದು ಆತ
ಸಾಯುವುದಾದರೆ ಇಲ್ಲೇ ಸಾಯಲಿ
ಬಾಳೆ ಗಿಡಕ್ಕೆ ಗೊಬ್ಬರವಾಗಲಿ . . .'
ಅಮ್ಮ ಅಪ್ಪನ ಬಾಯಿ ಮೇಲೆ
ಕೈಯಿಡುತ್ತಾ ಅಂದಳು ನಿಧಾನಕ್ಕೆ,
ಹಾಗೆ ಹೇಳಬೇಡಿ ನಿಮಗೇನೂ ಆಗದು ದೇವರಿದ್ದಾನೆ
ಎಂದು ಎದೆ ಮೇಲೆ ಕೈಯಿಟ್ಟುಕೊಂಡಳು . . .

‘ಕೂಲಿ ಗಂಡನ ಮಡದಿ ಖಾಲಿ ಗಡಿಗೆ ಇಣುಕಿ
ಕೂಳಿಗೆ ಕೈಚಾಚಿ ಅಂಗಲಾಚುವುದಕ್ಕೆ
ಯಜಮಾನತಿ ಬಳಿಗೆ ಹೊರಟಳು

‘ಸಾವಿಗಿಂತಲೂ ಕಠಿಣ ಹಸಿವು
ನೂರು ತಿವಿತಗಳನ್ನು ಸಹಿಸಿ ನಿಲ್ಲುತ್ತದೆ
ಅಪ್ಪಟ ಪ್ರೀತಿ
ಮನೆಯೊಳಗೆ ನೆರಳೊಂದು ನರಳುತ್ತಿದ್ದಾಗ
ಕರುಳ ಕರುಣೆ ಕಣ್ಣಿಗೆ ಎಷ್ಟು ಬೆಂಕಿ ಮತ್ತು ಸಹನೆ
ಅಮ್ಮ ಬೇಡುತ್ತಾಳೆ ದೀನವಾಗಿ
ಭೂಮಿತಾಯಿಯೇ ಬೇಡಿದಂತೆ ನೀರು ಮತ್ತು ಗೊಬ್ಬರ
ಹೃದಯವನ್ನು ಮಾತು ಕಲ್ಲುಗಳ ಬಡಿತಕ್ಕೆ ಸಜ್ಜು ಮಾಡಿ
ಮನುಷ್ಯನನ್ನು ಮನುಷ್ಯನ ಬಲೆಯೊಳಗೆ
ಮನುಷ್ಯತ್ವವನ್ನು ಉರಿವ ಒಲೆಯೊಳಗೆ
ಸಿಕ್ಕಿಹಾಕಿಸಿದ ಪ್ರಪಂಚದಲ್ಲಿ
ಆಸೆಗಳನ್ನೂ, ಆಕಾಂಕ್ಷೆಗಳನ್ನೂ ಮದಿರೆಯಂತೆ
ಹೀರುತ್ತಿದ್ದಾರೆ
ಭಾವನೆಗಳೆಲ್ಲವನ್ನು ನೋವು ಸುರಂಗದ ಕತ್ತಲೆಯೊಳಗೆ
ಮಾತ್ರ ಹರಿಸಲಾಗುತ್ತಿದೆ.

‘ಅಮ್ಮ ಮೂಕಿ, ಕತ್ತಲೆಯಂತೆ ತನ್ನ ವೇದನೆಗಳಿಗೆ
ಹಗಲ ನಕ್ಷತ್ರಗಳಂತೆ ಆಕಾಂಕ್ಷೆಗಳಿಗೆ
ನೂರು ನೀರ ಬುಗ್ಗೆಗಳ ಜುಳುಜುಳು ನಿನಾದಗಳು
ಸಾವಿರ ಮರಗಳ ಹಕ್ಕಿ ಕೊರಳುಗಳು
ಇಳಿಯಲಾರದಂಥ ಜಡ್ಡುಗಟ್ಟಿದ
ಕಲ್ಲು ಬಂಡೆಗೆ
ತನ್ನ ಕಥೆ ಹೇಳಲು ಹತಾಶೆಯಲ್ಲಿ

‘ಆಕೆ ಮಾತಾಡುತ್ತಾಳೆ ಯಾರಿಗೂ ಕೇಳದಂತೆ
ನೆಲದೊಳಗೆ ಹುಗಿದ ಹೂವನ್ನು ಮೇಲೆತ್ತುವಂತೆ
ತುಳಿದ ಹೂವನ್ನು ಎತ್ತಿ ಧೂಳ ಕೊಡವುತ್ತಿರುವಂತೆ
ಮತ್ತೆ ಬಿದ್ದು ಬಾಡಲಿರುವ ಹೂವಿಗೆ
ಕಂಬನಿ ಮುತ್ತು ಕೊಡುತ್ತಿರುವಂತೆ -
ಬೇಡ ಹೊರಟ ದಾರಿಯುದ್ದಕ್ಕೂ . . . .
‘ಹೇಳು . . . ಹೇಳು . . . ಗಿಡವೇ
ನಿನ್ನ ಬೆಳಗಿನ ಮಂಜಿನ ನೀರಿನ ಎರಕದಲ್ಲಿ
ಹರಳುಗಟ್ಟಿದ ಕಂಬನಿಯ ಕುರಿತು
ಸಾಕಿದ ಹರಕೆಯ ಕುರಿ
ಸಹಸ್ರ ಚಂದ್ರ ನೋಡುವಾಸೆಯ ಕುರಿತು

ನಿನ್ನ ಅರಳುತ್ತಿರುವ ಮೊಗ್ಗುಗಳಿಗೆ
ಎರಚುತ್ತಿರುವ ಬೆಂಕಿಯ ಕುರಿತು,
ನಿನ್ನ ಇಳಿಯುತ್ತಿರುವ ಬೇರುಗಳು
ಗಾಳಿ ವೀಣೆಯ ತಂತಿ ಮೀಟಲು
ಧೈರ್ಯ ಕೊಡುವುದಾದರೆ
ಕಳೆದ ಕಾಲದ ಗೋಧೂಳಿ ಬೆನ್ನಲ್ಲಿ ನಾನು
ಹೊಸ ಹಾಡ ಹಾಡುತ್ತೇನೆ.

'ಹೇ . . . ಹೇಳು ಮುಗಿಲೇ . . . .
ಭೂಮಿಯ ಎಲ್ಲ ಕ್ರೂರತನಗಳಿಗೂ
ಹಗಲು ದೂತನೊಂದಿಗೆ
ರಾತ್ರಿ ಸಹಸ್ರ ಕಣ್ಣುಗಳೊಂದಿಗೆ ಸಾಕ್ಷಿಯಾಗಿರುವ
ಮೌನ ಹಂದರವೇ
ನನ್ನಷ್ಟಕ್ಕೇ ನಾನು ತೋಡಿಕೊಂಡರೆ ಕೋಪ ಒಬ್ಬಂಟಿಯಾಗಿ -
ಹುಚ್ಚು ನನಗೆ
ನಕ್ಕರೆ ಬೇಗೆಯೊಳಗೆ ನಾನು ಅರ್ಹ
ಬದುಕ ಬರಡಿನೊಳ ಹೆಜ್ಜೆ ಹಾಕುವುದಕ್ಕೆ
ಸತ್ಯ ಸತ್ಯವೆಂದರೆ ನರಕ
ಸತ್ಯಕ್ಕೆ ಸಾವೆಂದರೆ ನರಕ
ತನ್ನ ಬಾಲವನ್ನೇ ಬಾಯೊಳಗಿಟ್ಟು ತಿಂದು ಬದುಕುವ
ಹಾವು ಸರ್ವಮಾನ್ಯ ಸಾಮಾನ್ಯ
ತನ್ನ ಚಿಪ್ಪಿನೊಳಗೆ ತಾನು ಸುತ್ತಿಕೊಳ್ಳುತ್ತಿರುವ
ಗೊಬ್ಬರದ ಹುಳುಗಳಿಗೆ
ಸಮಯವಿಲ್ಲವಲ್ಲ ಮಾತನಾಡಲು ನನ್ನ ಮತ್ತು ನಿನ್ನ ಬಗ್ಗೆ.

'ನಮ್ಮ ರಕ್ತ, ಮಣ್ಣು ಕಲಸಿದ ಕ್ರೂರತೆಯ ಹುತ್ತ
ಮಾಂಸ ಮೂಳೆಗಳ ಹುತ್ತದೊಳಗೆ ಯಜಮಾನಿಕೆಯ ಸರ್ಪ
ಸರ್ಪದ ಬಾಯೊಳಗೆ ಅಧಿಕಾರದ ವಿಷದ ಹಲ್ಲುಗಳು
ಸೈನ್ಯಗಳು
ಬುಸುಗುಡುವ ರಾಜಾಜ್ಞೆ
- ಇರುವೆಗಳೇ ಇರುವೆಗಳೇ ಹುತ್ತವ ಕಟ್ಟಿ
ನಿಲ್ಲುವೆವು ನಾವೂ ಜಗವನೆ ಮೆಟ್ಟಿ -
ಓ ಮುಗಿಲೇ ಜಗವೆಂದರೆ ನಾವೇ
ನಾವೆಂದರೆ ಶಾವೇ
ಎಷ್ಟೊಂದು ಹುತ್ತಗಳು ಮುಗಿಲೇ ನಿನ್ನ ಕೆಳಗೆ
ಎಲ್ಲ ಆಕ್ರಂದನಗಳಿಗೂ ಮಿಗಿಲೇ ನಿನ್ನ ಎತ್ತರ -
ನೆಗೆದು ಬಿಡಬೇಕು ನಾನು ಭೂಮಿ ಸರಪಳಿಯ ಕಳಚಿ
ನಿನ್ನ ಕಡೆಗೆ
ಹೊಸ ಲೋಕವೊಂದರ ತೆರೆಗೆ

ಹೊಸ ನಾಕವೊಂದರ ಕರೆಗೆ

'ಅಮ್ಮ ನಾಗರ ಕಲ್ಲಿನ ಬಳಿ ಒಂಟಿ ಮಂಡಿಯೂರುತ್ತಾಳೆ,
ಎರಡು ಹನಿ ಕಣ್ಣೀರ ತರ್ಪಣ ಕಲ್ಲ ನೆತ್ತಿಗೆ
ಮನೆಯಲ್ಲಿ ನೆರಳನ್ನುಳಿಸು ದೇವರೆ
ಬೆಳೆವ ಬಳ್ಳಿಗಳಿಗೊಂದಿಷ್ಟು ನೆಲ ಒದ್ದೆ ಮಾಡು
ನಾನು ಹುಚ್ಚಳಾಗುವ ಮುನ್ನ
ಇಲ್ಲವೇ ಲುಚ್ಚಳಾಗುವ ಮುನ್ನ
ಸಂಕಟಗಳ ಬಿರುಗಾಳಿ ನನ್ನನ್ನು ಸಮುದ್ರಕ್ಕೆ ಎಸೆದರೆ
ಎಲೆ ಬಳ್ಳಿಗಳಾಸೆಯ ತೆರೆ ನನ್ನನ್ನು ದಡಕ್ಕೆ ಒಗೆದರೆ

'ಓ ದೇವರ ಸತ್ಯವೇ
ನೀನು ನಿರ್ಮಾಣ ಮಾಡಿದ ಕತ್ತಲ ಕೂಪದಲ್ಲಿ
ಯಾರಿಗೆ ಯಾವ ಆಯುಧ
ಹೋ . . . . ಕಾಣಲಾರದ ದೇವನೆ
ನನ್ನ ಕಾಲಿಗೆ ಸರಪಳಿಯನ್ನು
ರೊಟ್ಟಿಗೆ ವೇದನೆಯನ್ನು
ದಿನಗಳಿಗೆ ಅನಿಶ್ಚಿತತೆಯನ್ನು ತುಂಬಿದವರಾರು?
ನನ್ನ ಪ್ರೀತಿಯ ನಿದ್ದೆಯಲ್ಲಿ ಗಾಯ ಮಾಡಿ
ಕೀವು ತುಂಬಿರುವುದನ್ನು ನೋಡಿ ಸುಮ್ಮನಿರುವೆಯಾ? ನ್ಯಾಯಸ್ಥನೆ
ನಿನಗೆ ಮುಡಿಸುವ ಹೂಗಳಿಗೇಕೆ ಭೇದ
ಹಂಚಿಕೊಳ್ಳುವುದಕ್ಕೆ ಏನೂ ಇಲ್ಲ ನಮಗೆ
ದಾಸ್ಯದ ಹೊರತು
ಆತ್ಮಕ್ಕೆ ಹೊಕ್ಕುವ ನೂರು ಕತ್ತಿಗಳ ಹೊರತು
ನೆಲಬಿಟ್ಟು ಹಾರಲಾಗದ ರೆಕ್ಕೆಗಳ ಹೊರತು

'ದೇವ ಯಾಕೀ ಪ್ರಲಾಪ
ಯಾಕೀ ಪೂಜೆ ಆಲಾಪ ಎಂದುಕೊಂಡಿರುವಿ
ಹುಟ್ಟಿಸಿದವನಿಗೆ ಹುಲ್ಲು ಮೇಯಿಸುವಾಗೇಕೆ ಭೇದ
ನಿನ್ನೊಡನೇಕೆ ವಾದ
ಕೇಳುವೆನಿಷ್ಟೇ ಈ ಜನ್ಮಕ್ಕೆ
ಹುಟ್ಟಿದ ತಪ್ಪಿಗೆ ಕರುಣೆಯಿಂದ ಕಣ್ಮುಚ್ಚಿಸು
ಕರುಳ ಕುಡಿಗಳು ಹಬ್ಬುವುದಕ್ಕೆ ಚಪ್ಪರವಾಗಿರು
ಯಾವ ಮಾತೆಗಾದರೇನು ಇದೇ ತಾನೇ ಮಾತೇ
ಬಂದಳಿಕೆಯಂಥ ಚಿಂತೆ
ಒಳಗಿನ ನೂರು ತಿವಿತಗಳೊಂದಿಗೆ
ಜಡ್ಡುಗಟ್ಟಿದ ಹೃದಯ ಬಿಗಿತದೊಂದಿಗೆ
ಕೊನೆಗೆ ಸೋಲಲೇಬೇಕಾದ ಹಿಂಜರಿಕೆಯೊಂದಿಗೆ
ಆಕೆ ಮುಂದಡಿಯಿಡುತ್ತಾಳೆ ಗಂಜಿ ಗಡಿಗೆಯೊಂದಿಗೆ

‘ಅರ್ಥೈಸಲಾಗದ ಬದುಕೇ
ನೀನು ಕಲ್ಲಿಗಿಂತಲೂ ಕಠಿಣ
ಬೇವಿಗಿಂತಲೂ ಕಹಿ
ಹೊಟ್ಟೆ ಬೇಡುವ ಹಸಿವಿಗೆ ಉಗುಳಲಾಗದ ಗಂಟಲಿಳಿಯದ ಕೆಂಡದುಂಡೆ
ಮೂರೂಮುಕ್ಕಾಲು ಘಳಿಗೆಯ ಇದ್ದಿಲ ವ್ಯಾಪಾರಿ ಯಾರು?

‘ಅಪ್ಪ ಅಮ್ಮ ಕೇಳೀ ಕೇಳೀ ಉಗುಳ ಜೊತೆಗೆ ನುಂಗಿ
ಆಕಾಶ ದೃಷ್ಟಿಸಿದರು
ಹೊಟ್ಟೆಯೊಳಗೆ ಒಳಗಣ್ಣ ನೋಡುತ್ತಾ
ಮುಳ್ಳುಗಿಡದೊಂದಿಗೆ ಹಿಂಜುತ್ತಾ’

* * *

ಅಂಗುಲಿಮಾಲ ಉಗುಳು ನುಂಗಿದ
ಮರಗಿಡಗಳು ಒಡೆಯನಿಗೆಂಬಂತೆ ಚಾಮರ ಬೀಸುತ್ತಲೇ
ಇದ್ದವು
ತಂಗಾಳಿಯನ್ನು ಆಚೆಗೆ ಈಚೆಗೆ ದಬ್ಬುತ್ತಾ
ಎದುರಿಗೆ ಶಾಂತಿ ಹಿಮ ಶಿಖರದಂತೆ ಪ್ರಸನ್ನ ಬುದ್ಧವದನ
ಲೋಕ ಗೆಲ್ಲುವ ನಿಗೂಢ ರಹಸ್ಯ ಕೇಳುತ್ತಿರುವಂತೆ
ಸುತ್ತ ಸಹಚರರ ಶಿಲಾ ಮೂರ್ತಿಗಳು
ಏನು? ಬೇಟೆಯಾಡುವ ಹುಲಿ
ಬೇಟೆಯೊಂದಿಗೆ ಕುಶಲ ವಿಚಾರಿಸುತ್ತಿದೆಯೇ?
ಚಕಿತಗೊಂಡು ತಮ್ಮನ್ನೇ ಮರೆತ ಹಲ್ಲಿ ಎರಣೆಗಳು
ಇದೇನಿದು ಕಾಡಲ್ಲಿ ಯಾರಿಲ್ಲವೇ?
ಕದ್ದು ಕದ್ದು ಇಣುಕುವ ಸೂರ್ಯ
ಸ್ವಲ್ಪ ತಾಳು ತೊಂದರೆ ಕೊಡಬೇಡ ಮಧ್ಯ
ಅವನನ್ನು ತಡೆಯಲು ಪ್ರಯತ್ನಿಸುವ ಮೋಡ ತುಂಡುಗಳು
ಮಾತುಮಾತಿಗೆ ಸಂಗೀತ ನುಡಿಸುವ ಕಾಡು ಹಕ್ಕಿಗಳು
ಮೌನಕ್ಕೆ ಹಿಮ್ಮೇಳ ನುಡಿಸುವ ಜೀರುಂಡೆಗಳು.

ಯಾಕೆ ಅಂಗುಲಿಮಾಲನ ಮುಖ ಬಿಗಿಯುತ್ತಿದೆ
ಕಣ್ಣುಗಳು ಕಿರಿದಾಗುತ್ತಿವೆ
ಕಾಲ ಬೆರಳುಗಳೇಕೆ ನೆಲದತ್ತ ಮುದುರಿ ಹೊಕ್ಕುತ್ತಿವೆ
ಕರಿಮೋಡ ಆ ದೇಹದ ಮೇಲೆ ಮಳೆ ಸುರಿಸಿ
ನೀಲದಲ್ಲಿ ಲೀನವಾಯಿತೋ
ಅಥವ ರಕ್ತ ಕುದ್ದಾವಿಯ ಚರ್ಮ ಬಟ್ಟೆ ಹಿಡಿದು
ಹನಿಸುತ್ತಿದೆಯೋ
ಹಾಗೇ ಚೆನ್ನಾಗಿ ರೋಮ ಕಾಡುಗಳಿಂದ ಎದೆಯೋಣಿಯೊಳಗೆ
ಹರಿಯುತ್ತಿದೆಯಲ್ಲ ಬೆವರು

ಆ ನೆಟ್ಟ ನೋಟದಿಂದ ಶಿಲೆಯಾದನೋ
ಅಥವ ಯಾವ ನೆನಪು ಸಮುದ್ರಕ್ಕೆ
ಬಲೆಹಾಕಿ ಕೂತಿದೆ ಅದು
ಎಲ್ಲ ಸುಮ್ಮನೆ ಕುಳಿತಿದ್ದರು
ಮುತ್ತು ತರಲು ಕಡಲ ನುಗ್ಗಿದವನ ಕಾಯುತ್ತಾ
ದಡದಲ್ಲಿ ಗುಂಪಾಗಿ ಕೂತಂತೆ
ಎದ್ದು ಬಂದು ಸಮುದ್ರದ ನೀರು ಮೈಯಿಂದ ಸೀಟಿದಂತೆ
ಬೆವರ ತೆಗೆದೊಗೆದು ಅಂಗುಲಿಮಾಲ ಎಂದ
(ಬಿಲದಿಂದೆಳೆದ ಹಾವಾಗದಿರು ನೆನಪೇ . . . . )
'ತಂದೆಯೇ,
ಇಷ್ಟು ದಿನ ಭಾವನೆಗಳ ಕಳೆದುಕೊಂಡು ಕಲ್ಲಾಗಿದ್ದ ನಾನು
ಇವತ್ತಿನಿಂದ ಭಾವನೆಗಳ ಪುಕ್ಕಗಳೊಂದಿಗೆ ಹುಟ್ಟುತ್ತಿದ್ದೇನೆ.
ಯುದ್ಧರಂಗದಲ್ಲಿ ನಾನು ಮೆಲುಕು ಹಾಕದ ಕುದುರೆಯಾಗಬೇಕೆಂದಿದ್ದೆ
ಸೇಡಿನ ಕಿರೀಟವಿಟ್ಟ ಮೇಲೂ ನೆರಳಿಗೆ ಮರಳಿಸಿದ್ದೀರಿ
ಇರಲಿ ಹೇಳುತ್ತೇನೆ'.

(ನನ್ನ ಹೃದಯದಿಂದ ನೋವ ಗೆಡ್ಡೆಯನ್ನೆ ಕೀಳುತ್ತಾ
ಕರುಳ ಗಾಯಕ್ಕೆ ಬೆರಳ ಸೋಕಿಸುತ್ತಾ)

* * *

'ಆ ದಿನ ನಾನು ಹೊರಟೆ
ಒಡೆಯನಿಗೆ ವಿಷಯ ಮುಟ್ಟಿಸಿ ನಾನು ದುಡಿಯಲು
ಲೋಹಿತ ಮತ್ತು ಯಜ್ಞ
ನೆನಪಿಟ್ಟುಕೊಳ್ಳಿ ತಂದೆ ಮತ್ತು ಮಗನ ಹೆಸರು
ಎಷ್ಟೋ ಕೂಲಿಗಳ ರಕ್ತಧಾರೆಯನ್ನು
ತಮ್ಮ ಆಸ್ತಿ ಯಜ್ಞಕ್ಕೆ ತರ್ಪಣ ಕೊಟ್ಟ ಋಷಿ ಮುನಿಗಳು
ಬಾಯಲ್ಲಿ ಹಣದ ಮಂತ್ರ
ಮಗ ಪೀಡೆ ನಿವಾರಕ ರಾಮ
ಅಪ್ಪ ವಿಶ್ವಾಮಿತ್ರ
ಎಂದೂ ದುಡಿಮೆಯಿಲ್ಲ ಆ ಕೈಗಳಿಗೆ
ತಲೆಯೊಳಗೆ ಹೊಗೆ ಕವಿದಿಲ್ಲ
ಬೇರೆ ಮರದ ಬೆವರ ಬೇರಿನಿಂದ ಹೀರಿ
ಆಕಾಶಕ್ಕೆ ಹರಡಿದ ಬಂದಳಿಕೆಯದು

'ಓ ರಕ್ತ ಕುಡಿದ ಬಂದಳಿಕೆಯೇ
ನಿನ್ನ ಎಲೆಯೂ ಹಸಿರಾಯ್ತೇ,
ನಿನ್ನ ಹೂವೂ ಬಿಳಿಯಾಯ್ತೇ,
ನೋಡು ನಿನ್ನ ಕಾಲುಗಳಡಿ ಸಿಲುಕಿ
ಮುರುಟಿ ನಿಂತ ಮರದ ಬೇರು
ನಿತ್ರಾಣವಾಗಿದೆ, ಅದಕ್ಕೇ ನಿನ್ನ ಕಾಲುಗಳನ್ನು
ಈ ಮರಕ್ಕೆ ಚಾಚು,

ಎಂದು ಕೈ ಚಾಚಿದೆ ಲೋಹಿತನತ್ತ.

'ಸಿಡುಕಿದ ಅವನಪ್ಪ
'ನೀವು ಕೂಲಿ ಸೂಳೆ ಮಕ್ಳು ನಾಟಕ ಆಡ್ತೀರಿ'
ಮಗ ಯಜ್ಞ. . . .
ಏನಂದಾ ಗೊತ್ತೆ,
'ದಿನವೂ ಸುಳ್ಳು ಹೇಳ್ತಾನೆ ಮುದಿಯ, ಕೆಲಸ ತಪ್ಪಿಸಿಕೊಳ್ಳೋಕೆ,
ಸತ್ತರೆ ಸಾಯಲಿ, ಬಾಳೆ ಗಿಡಕ್ಕೆ ಗೊಬ್ಬರವಾಗಲಿ
ಬರಲು ಹೇಳು ಆತನಿಗೆ.'
ಮೆದುಳು ಬೆವರಿತೇನೋ ನನಗೆ
ರಕ್ತ ಕಾದು ತಲೆ ಗಿರ್ರೆಂದಿತು
ಏಯ್ ಎಂದು ಹಲ್ಲು ಕಡಿದು ಮುಷ್ಟಿ ಬಿಗಿದೆ

'ಲೋಹಿತ ಮೊಸಳೆ ಕಣ್ಣೀರು ಹಾಕಿದ.
ಹೋಗಲಿ ಬಿಡು ಯಜ್ಞ
(ಮುದಿ ಎತ್ತು ಚೇತರಿಸಿಕೊಳ್ಳಲಿ
ನಾಳೆ ಇದೆಯಲ್ಲ ನೊಗ ಲಗ್ನ
ಅಥವ ನೋಡಿದರೆ ಈತನ ಕಣ್ಣು
ತರಿದು ಬಿಡಬಹುದೇನೋ ನಿನ್ನನ್ನು)

'ನನ್ನ ಸುತ್ತ ನಿಂತಿದ್ದರು ಆಳುಗಳು (ಮನುಷ್ಯರಲ್ಲ ಆಳುಗಳು)
ಯಜ್ಞ ಹಲ್ಲು ಕಡಿದ
ಅವರನ್ನೊಮ್ಮೆ ನೋಡಿದ
ತುಟಿ ಕಚ್ಚಿ ನೆಲಕ್ಕೆ ಅಂಗಾಲು ಕುಟ್ಟಿದ
ಹೀಗೇ ಬಿಟ್ಟರೆ ಇವರಿಗೆ
ಸಲಿಗೆಯಾಗುತ್ತದೆ ಎಂದಿರಬಹುದೇನೋ
ಎಳೆದುಕೊಂಡು ಬರುತ್ತೇನೆ ಅವನನ್ನು
ಸೊಕ್ಕು ಮುರಿದು ರಟ್ಟೆ ಹಿಡಿದೆಳೆದು
ಮುದಿಯನಾದರೂ ಸಾಲ ತೀರಿಸಲಾಗದ ಸೋಮಾರಿಯನ್ನು,
ಎಂದು ಹೆಜ್ಜೆ ಹಾಕಿದ ದಬದಬ ಮಾರುದ್ದ'

ಅಂಗುಲಿಮಾಲನಿಗೆ ಎದುರು ಕೂತಿಲ್ಲ ಬುದ್ಧ ಬುದ್ಧನಾಗಿ
ಅನುಚರರೆಲ್ಲ ಅನುಚರರಾಗಿ
ಬದಲಿಗೆ ಕಳೆದ ಕಾಲವೇ ಬಂದು ಕುಳಿತಿದೆಯಲ್ಲಿ ಮತ್ತೆ
ಅಂಗುಲಿಮಾಲನನ್ನು ತನ್ನ ನಂಜಿನಿಂದ ತಿವಿಯುತ್ತಾ
ಅಂಗುಲಿಮಾಲ ಅಂಗುಲಿಮಾಲನಲ್ಲ
ಶಾಂತಿಯನ್ನರಸಿ ಬಂದ ಬುದ್ಧನೆದುರಿಗೆ
ಬದಲಿಗೆ ದೀಪವಾಗಿದ್ದಾನೆ
ಶಾಂತಿಯ ಗರ್ಭದೊಳಗಿರುವ ಅಶಾಂತಿಯ ತೋರಿಸಲು
ಅಶಾಂತಿಯ ಗರ್ಭದೊಳಗಿರುವ ಶಾಂತಿಯ ತೋರಿಸಲು.

ಶಾಂತಿ ಬದ್ಧ
ಕಾಲ ಟೊಂಗೆಯ ಫಲ ಬುದ್ಧ
ಕಡೆಯುತ್ತಿದ್ದಾನೆ ಮನಸ್ಸಿನೊಳಗೇನೋ ಗಾಢ
ಅಂಗುಲಿಮಾಲ ವಿವರಿಸುತ್ತಿರುವುದು ಪ್ರಾಪ್ತನ ಕಥೆಯನ್ನಲ್ಲ
ಕಾಲ ದಾಖಲೆಗಳ ಹಾಳೆಗಳಲ್ಲಿ
ಶಾಂತಿ ಮುದ್ರೆ ಒತ್ತಿದ ಬಲಿಷ್ಠ ಕೈಗಳ ಮುಷ್ಠಿಯೊಳಗಿರುವ
ಮುದ್ರಾ ಹಿಡಿಕೆಯ ಕಥೆ
ಅದು ಪ್ರಾಪ್ತನ ಕಥೆಯಲ್ಲ
ಯಾವ ಹಾಳೆಗಳಲ್ಲೂ ದಾಖಲಾಗದ ಅತೃಪ್ತಿಯ ಕಥೆ
ಅರಸುತ್ತಿರುವ ಶಾಂತಿಗೆ ಮುನ್ನುಡಿಯ ಕಥೆ
ಶಾಂತಿ ಕೊಳದ ತಳದಲ್ಲಿರುವ ಕೆಸರ ಕಥೆ

ಎಲ್ಲ ಸತ್ಯಗಳನ್ನು ಪುಟಗಳಲ್ಲಿ ಕಟೆದಿಟ್ಟಿಲ್ಲ
ಸತ್ಯವೆಂದರೆ ಗದ್ದೆಯಲ್ಲಿ ಬೆಳೆದ ಪೈರು
ಈ ಪೈರು ಮುಂದಿನ ಪೈರಿಗೆ ಸರಳ ರೇಖೆಯ
ಹಿಂದಿನ ಬಿಂದುವಷ್ಟೇ,
ಸತ್ಯವೆಂದರೆ ಹೆಜ್ಜೆಯಿಂದ ಭೂಮಿಗಿಳಿದ ಬೆವರು
ಇನ್ನೂ ನಾನು ಹಾಯದಿರುವ
ಕಾಲ ಸಮುದ್ರವನ್ನು ಭೇದಿಸುತ್ತೇವೆ
ಅಲ್ಲಿ ಕೇವಲ ನಮ್ಮ ಹೆಜ್ಜೆಗಳು
ಭೂಮಿ ಹಾಳೆ ಮೇಲೆ ಅಚ್ಚೊತ್ತುತ್ತವೆ.
ಯಾರೊ ಹಿಂದಿನಿಂದ ದೂಡುತ್ತಿರುವುದರಿಂದಲ್ಲ
ಅಥವಾ ಆಮಿಷ ಒಡ್ಡುತ್ತಿಲ್ಲ ಯಾರೂ
ಬೀಜ ಸಿಡಿವುದಕ್ಕೆ ಆಜ್ಞೆಯಾಗಲೀ
ಎಲೆ ಉದುರುವುದಕ್ಕೆ ವಿನಂತಿಯಾಗಲೀ
ಯಾವ ಗಾಳಿಯೂ ಮುಟ್ಟಿಸುವುದಿಲ್ಲ

ಶಾಂತಿಯನ್ನರಸುವ ಬುದ್ಧನ ಕಣ್ಣಲ್ಲಿ ಕಣ್ಣೀರು ಬಂದದ್ದು
ಶಾಂತಿ ಸಮುದ್ರವನ್ನು ಕದಡಿದ್ದಕ್ಕಲ್ಲ ಹೆಬ್ಬಲೆ
ಬದಲಿಗೆ
ಶಾಂತಿ ಸಮುದ್ರಕ್ಕೆ ರಕ್ತ ಬೆರಸಿದ್ದಕ್ಕೆ
ಕೊನೆಯಾಗಲಾರದ ಹಣದಾಸೆಗಾಗಿ ವಿಷ ಜಂತುಗಳು.

ಆ ಮನಸ್ಸಿನೊಳಗೆ ತಳಮಳ
ಯಾವುದು ಶಾಂತಿ
ಯಾವುದು ಆಸೆ
ಯಾವುದು ದುಃಖ
ಶಾಂತಿಯೆಂದರೆ ಗಾಳಿ ಚಲನೆಯ ಸ್ತಬ್ಧತೆಯಲ್ಲ
ಸಮುದ್ರದಲೆಗಳ ಅಡಗುವಿಕೆಯಲ್ಲ

ತಿರುಗುಚಕ್ರದ ಮಲಗುವಿಕೆಯಲ್ಲ
ಯುಗದ ನಿದ್ದೆಯಲ್ಲ
ಜಗದ ಜಡತೆಯಲ್ಲ
ಅಥವಾ ಶಾಂತಿಯೆಂದರೆ ಕಟುಕನೆದುರು
ಕುರಿ ತಲೆ ತಗ್ಗಿಸುವಿಕೆಯಲ್ಲ
ಖಡ್ಗ ಮಿಂಚಿಗಡಗಿದ ಲೋಕದ ಧ್ವನಿಯಲ್ಲ

ಹಾಗಾದರೆ ಯಾವುದು ಶಾಂತಿ
ಅರಸುವ ಒಂದೊಂದು ಹೆಜ್ಜೆಗೂ ಬೆರೆತಿರುವ
ಪ್ರಶ್ನೆ ಕಗ್ಗತ್ತಲ ಗೋಳಗಳು

'ಅಂಗುಲಿಮಾಲ ಹೇಳು ನಿನ್ನ ಕರುಣ ಕಥೆಯನ್ನು'

'ಬುದ್ಧದೇವ
ಜಗತ್ತು ಇಡುವಾಗ
ಒಂದೊಂದು ಹೆಜ್ಜೆಯನ್ನೂ ಕಾಲಗತಿಯೊಂದಿಗೆ
ಅಲ್ಲಿ ನುಡಿಯುತ್ತಿರುವ ಒಂದೊಂದು ಶಬ್ದವನ್ನೂ ಕೇಳು
ರಕ್ತದ ಕಲೆಯಿಲ್ಲದ
ಚಿಗುರಿನ ಕೊಲೆಯಿಲ್ಲದ ಹೆಜ್ಜೆಯಿದ್ದರೆ
ಆಕ್ರಂದನದ ಧ್ವನಿಯಿಲ್ಲದ ಗೆಜ್ಜೆಯ ನಾದವಿದ್ದರೆ
ನನ್ನ ಮೇಲಿನ ನಿನ್ನ ಪ್ರೀತಿ ಅಶಾಶ್ವತವಾಗುತ್ತದೆ.

'ಅಂದು ನಾನು
ಮುಚ್ಚಿದ ಬಾಯೊಳಗಿನಿಂದ ಹಲ್ಲು ಮಸೆದೆ
ರಪ್ಪನೆ ಕುಳಿತು ಕುಡುಗೋಲು ಮಸೆದೆ
ಕಿಡಿ ಹಾರಿದವು ಉಲ್ಕೆಯಂತೆ
ಕರುಳು ಚುರುಗುಟ್ಟುತ್ತಿದೆಯೋ ಎಂಬಂತೆ
ಚರಚರ ಶಬ್ದದೊಂದಿಗೆ
ಮಸೆದೆ, ಮಸೆದೆ
ಯಜ್ಞನನ್ನೇ ಹೊಸಕುತ್ತಿರುವಂತೆ
ಯಜ್ಞನ ರಕ್ತವನ್ನು ಕೋಪಾಗ್ನಿಗೆ
ತುಪ್ಪದಂತೆ ಸುರಿಯುತ್ತಿರುವಂತೆ
ಆಳುಗಳು ಅಂದುಕೊಂಡರು
ಏನು ಮಾಡುತ್ತಿದ್ದಾನೆ ಈತ
ಮಸೆದು ಮಸೆದು ಕತ್ತಿ ಮುಗಿದು ಹೋಗುತ್ತದೆಯೋ
ಪ್ರಪಂಚದ ಅರಿವಿಲ್ಲದಂತೆ ಮಸೆಯುತ್ತಿದ್ದಾನಲ್ಲ
ಏನನಾಹುತವಾಗುತ್ತದೆಯೋ ಈ ಪಾಟಿ
ಸಿಟ್ಟು ಬಂದರೀತನಿಗೆ.
ಲೋಹಿತನಿಗೆ ಹೆದರಿಕೆಯಾಗಿರಬೇಕು
ಮುಚ್ಚಿಕೊಳ್ಳಲದನ್ನು ಬೊಗಳಿದ

ಸಾಕೋ ಕತ್ತಿ ಮಸೆದದ್ದು
ತಲೆ ತೆಗೆಯಬೇಕೇನದರಿಂದ?
ಮೆಚ್ಚಿಕೊಂಡ ನನ್ನನ್ನು
ಚೆನ್ನಾಗಿ ಮಸೆಯುತ್ತೀಯ ನೀನು
ಮೌನದಲ್ಲೇ ಕುದಿಯುತ್ತಿದ್ದೆ ನಾನು
ಹೊಳೆದ ಕತ್ತಿ ಬಾಯಿ ಹರಿತಕ್ಕೆ
ಬೆರಳಿಟ್ಟು ತಲೆಯೆತ್ತಿದಾಗ
ಎಳೆದು ತರುತ್ತಿದ್ದಾನೆ
ಯಜ್ಞ ದರ ದರ
ಮುದಿ ಅಪ್ಪನನ್ನು
ಹಾ . . . . ಸಾಯಲಿಕ್ಕಾಗಿದ್ದ ನಿಶ್ಯಕ್ತ ಅಪ್ಪನನ್ನು
ಮೂಳೆಗಂಟಿದ್ದ ಚರ್ಮ ತರಚಿ ಕಿತ್ತು
ರಕ್ತವಿಲ್ಲದೆ ಬೆಳ್ಳಗಾಗಿತ್ತು ಕೈಕಾಲುಗಳಲ್ಲಿ
'ಮನೆಯೊಳಗೇನಿದು ರೋದನ
ಇರುವಳೊಬ್ಬಳೇ ತಂಗಿ ಯಾಕೆ ಕಿರುಚಾಟ, ಚೀರಾಟ
ಬಾಗಿಲು ಹಾಕಿದೆ ಒಳಗಿಂದ
ಅಪ್ಪಾ . . . . ಅಮ್ಮಾ . . . . ಅಣ್ಣಾ . . . .
(ಗಂಟಲೊಡೆದು ಹೊರಡುತ್ತಿದೆ)
ಏನಾಯಿತು ನನ್ನಪ್ಪನ ಪ್ರೀತಿಯ ಬಳ್ಳಿಗೆ
ನನ್ನ ತಂಗಿಗೆ, ಸುನೀಲಳಿಗೆ
ಕಿರುಚಾಟ,
ಭಯದ ಬಾಗಿಲು ತೆರೆಯಲಿಲ್ಲ ಬಡಿದರೂ
ಎದೆ ಬಡಿತ
. . . . ಅಪ್ಪನಿಗೇನಾಗಲಿಲ್ಲ ಭಯ ಪಡಬೇಡ
ಒಂದು ಬೊಗಸೆ ನೀರು ತುಂಬಿಕೊಡು ಗಡಿಗೆಗೆ
ಬಾಗಿಲು ತೆಗಿ, ನಾನು . . . . ನಿನ್ನಣ್ಣ
ನಾನಿದ್ದೇನೆ ಬಾಗಿಲು ತೆಗಿ, ಬಾಗಿಲು ಹಾಕಿಕೊಂಡೇಕೆ ಕಿರುಚಾಟ?
ಇಲ್ಲ - ಸದ್ದಿಲ್ಲ
ಕಾಲಿನಿಂದೊದೆದಾಗ ಮುರುಕು ಗುಡಿಸಲು ಸಹಿತ
ಅರ್ಧ ಬಿತ್ತು.
. . . . ಯಜ್ಞಾ . . . .
ಕೀಚಕ,
ರಕ್ತ ಕುದಿದು ಬಾಯಿ ಗುಡುಗಿ ಮುಗಿಸುವುದಕ್ಕಿಂತ ಮೊದಲೇ
ಕೈ ರೇಗಿಹೋಗಿತ್ತು ಮಿಂಚಿನಂತೆ ಅವನ ಮೇಲೆ
ತೋಳು ಹಿಡಿದೆಳೆದು ಕೆಡವಿದೆ ಕಾಲುಬುಡಕ್ಕೆ.
ತಲೆಕೆದರಿ ಬಟ್ಟೆ ಅಸ್ತವ್ಯಸ್ತವಾಗಿದ್ದ ಮುದ್ದು ಗೊಂಬೆ
ಬಿಕ್ಕಳಿಸಿ ಮುಖ ತೋರಿಸಲಾಗದೆ
ಆಚೆ ತಿರುಗಿ ಕುಳಿತು ನನ್ನ ಕರುಳು ಹೃದಯದಲ್ಲೆತ್ತಿ ಇಟ್ಟಳು.
ಕೋಪದಿಂದ ಹುಚ್ಚನಾದೆ, ಗುರುದೇವ
ಕೋಪದಿಂದ ಹುಚ್ಚನಾದೆ

ಹುಚ್ಚನಾಗಿ ಆ ನೀಚನ ಕೇಶ ಹಿಡಿದು
ಎತ್ತಿ ಕುಕ್ಕಿದರೂ ತಣಿಯಲಿಲ್ಲ ರಕ್ತ
ಕೈಗಳಿಂದ ಕಾಲ್ಗಳಿಂದ ಎಲ್ಲೆಡೆಯಿಂದ
ಜಜ್ಜಿದೆ ಹುಚ್ಚನಂತೆ
ಮುಖ ಎತ್ತಿದೆ.
ಹೊರಗೆ ಕೇಳದ - ದೇಹ ಎತ್ತಿ ಕುಕ್ಕಿದಂಥ
ಬಿಕ್ಕಳಿಕೆ ಆಕೆಗೆ
ಅಪ್ಪ . . . ನೀರು . . . ? ಅಪ್ಪ . . . ? ನೀರು . . . ?
ಅಯ್ಯೋ ಏನು ಮಾಡಲಿ ಈ ದುಷ್ಟನನ್ನು
'ಏಯ್' ಕಿರುಚಿ
ರಟ್ಟೆ ಹಿಡಿದು ದರದರಾ
ಎಳೆದುಕೊಂಡು ಹೊರಟೆ ದಾರಿಯಲ್ಲಿ
ಬಾಯಾರಿದ ಅಪ್ಪನಿಗೆ ಆತನ ರಕ್ತವನ್ನೇ
ಏಕೆ ಕುಡಿಸಬಾರದು ಎಂದು.
ಕಿರುಚಿದ ಆತ
ಭಯದ ಬಾಯಿಯಿಂದೆದ್ದ ಗತ್ತಿನ ಸ್ವರದಲ್ಲಿ
ಗಂಟಲು ಒತ್ತಿ ಹಿಡಿದ ಕಾಳಿಂಗದಂತೆ ಚಡಪಡಿಸಿದ
ತಪ್ಪಿಸಿಕೊಳ್ಳಲು ಪ್ರಯತ್ನಿಸಿದ
ಬೋನಿನೊಳಗಿಟ್ಟ ಹುಲಿಯಂತೆ
ಮೊರೆಯಿಟ್ಟ ಸುತ್ತ ಮುತ್ತ ನೋಡಿ ಸಮಯ ಕಾದು
ಎಲ್ಲರಿಗೂ ತಿವಿದ ಗೂಳಿಯನ್ನು ಯಾರೂ ಬಿಡಿಸಲಿಲ್ಲ.
ನಾನು ಆತನ ದರ್ಪದ ಬೆಳ್ಳಿ ತಟ್ಟೆಯಲ್ಲಿ ಇಣುಕಿದೆ
ಇದೇ ಮೊದಲ ಬಾರಿಗೆ ಪಿತ್ತದ ವಾಂತಿಯನ್ನು
ಹಸಿದ ನಾಯಿಯಂತೆ ನೆಕ್ಕುತ್ತಿದ್ದ.
ಗುಹೆಯ ಅಂತರಂಗಗಳಲ್ಲಿ ಬುಸುಗುಟ್ಟುತ್ತಿದ್ದ ಹಾವುಗಳು
ಲೊಚಗುಟ್ಟುವ ಹಲ್ಲಿಗಳಾದವು
ಬಿಸಿಯೇರಿ ಬೆವರುತ್ತಿದ್ದ ದೇಹ ಮತ್ತೆ ಮತ್ತೆ ಅವನನ್ನೆಳೆದು ಜಗ್ಗಿದರೂ
ತಗ್ಗಲಿಲ್ಲ
ಪೆಟ್ಟು ಬಿದ್ದ ಆನೆಯ ಸೊಂಡಿಲಲ್ಲಿದ್ದಂತೆ
ಏನೇನೋ ಹೇಳಿದ, ದೇವರಾಣೆ, ತಾಯಿಯಾಣೆ.
ನಗು ಕೋಪವನ್ನು ಕೋಪ ನಗುವನ್ನು
ಬರಿಸುತ್ತಿದ್ದವು ನನ್ನೊಳಗೆ
ನನ್ನಪ್ಪ ನಿನಗೇನು ಮಾಡಿದ್ದ
ಆಸ್ತಿ ತಿಂದನೋ ಜಗಳ ಮಾಡಿದ್ದನೋ
ಕೊನೆ ಪಕ್ಷ ದುರುಗುಟ್ಟಿ ನೋಡಿದ್ದನೋ
ಆ ನನ್ನ ಸುನೀಲೆ . . .
ಕೂಲಿಕಾರರ ಮನೆಯ ಹೆಣ್ಣು ಮಕ್ಕಳೆಂದರೆ
ನಿನ್ನ ಸ್ವತ್ತು ಎಂದುಕೊಂಡೆಯಾ?
ಈ ಊರಿನ ಪ್ರತಿ ಹೆಣ್ಣುಮಕ್ಕಳ
ಬಯಕೆಗಳ ಚಿಗುರಿನ ಯಮ ನೀನು

ಇದೇ ತೋಳುಗಳು ದುಡಿದ ಹಣ ನಿನ್ನ ಶಕ್ತಿಯಾದರೆ
ಬಡತನ ತನ್ನ ಹೆಣ್ಣುಮಕ್ಕಳನ್ನು
ತನ್ನ ಕೈಯಾರೆ ತರ್ಪಣ ಕೊಡಬೇಕೆಂದು
ಆ ಹೂವು ಮನಸ್ಸುಗಳನ್ನು ಹೊಸಕಿ ಹಾಕುತ್ತಿರುವುದನ್ನು
ಕಣ್ಣಾರೆ ನೋಡಬೇಕೆಂದು ನೀನು ಬಯಸಿದರೆ
ಇದೇ ತೋಳುಗಳು ನಿನ್ನ ಶಕ್ತಿಯನ್ನು ಪ್ರಶ್ನಿಸುತ್ತವೆ
ನನ್ನ ತೋಳು ನಿನಗೆ ಆಸ್ತಿಯನ್ನು ಶೇಖರಿಸುತ್ತಿರುವಾಗಲೇ
ನನ್ನ ಬದುಕಿನ ಕೊರಳನ್ನೇ ಹಿಚುಕಿಕೊಳ್ಳುತ್ತಿದೆ ಅದು.
ಈ ತೋಳು ಬರೀ ನಿನ್ನ ನಿಷ್ಠೆ ಕೆಲಸವನ್ನು
ಮಾತ್ರ ಮಾಡುವುದಿಲ್ಲ.
ಅದು ತನ್ನ ಸ್ವಾಭಿಮಾನದ ಕೆಲಸವನ್ನೂ ಮಾಡುತ್ತದೆ
ಈ ತೋಳು ನಿನಗೆ ಗುಲಾಮನಾಗಿ ಹೋಗಿದೆಯೆಂದು
ತಿಳಿದಿದ್ದೀಯಾ?
ಇದು ಬರೀ ದೇಹದ ಅಂಗವಾಗಿ ಹೋಗಿದ್ದರೆ
ಅದು ಗುಲಾಮನಾಗಿರಬಹುದಿತ್ತು
ಆದರೆ ಅದು ನನ್ನ ಬಡಿದ ಮನಸ್ಸಿನ ಪ್ರತಿನಿಧಿಯಾಗಿದ್ದರೆ
ಹರಿತ ಖಡ್ಗವಾಗುತ್ತದೆ
ನನ್ನ ಹೃದಯದಿಂದ ರಕ್ತವನ್ನು
ಪಡೆದುಕೊಳ್ಳುತ್ತಿದ್ದರೆ ನನ್ನ ಉದಯಕ್ಕಾಗಿ
ಹಪಹಪಿಸುತ್ತದೆ ಅದು.

‘ಏನೂ ಅರ್ಥವಾಗುವುದಿಲ್ಲ ಆತನಿಗೆ.
ಬಿಡು ಬಿಡು ಎಂದು ಗೋಗರೆಯುತ್ತಿದ್ದಾನೆ.
ಎಳೆದು ತಂದಿದ್ದೇನೆ ಹೊಲಕ್ಕೆ
ಎಲ್ಲ ನಿಂತು ನೋಡುತ್ತಿದ್ದಾರೆ

‘ಅಪ್ಪ ಎಲ್ಲಿ, ಎಲ್ಲಿ ಅಪ್ಪ
ಅರ್ಥವಾಯಿತು ಎಲ್ಲ ನನಗೆ
ದುಃಖಿತಪ್ತ ಗುಂಪಿನ ನಡುವೆ
ಹರಕು ಬಟ್ಟೆ ಮುಚ್ಚಿದ ಅಪ್ಪನ ಮುಖ
ಅವನ ಶೋಕ ಗೀತೆಯೊಂದಿಗೆ ತಮ್ಮ ಬದುಕ ಹಾಡನ್ನು
ತಾಳೆ ಹಾಕುತ್ತಿರುವ ಜನ
ನಿರ್ಲಿಪ್ತ ದೃಷ್ಟಿಯಲ್ಲಿ ವೇದನೆ ಪಡುತ್ತಿದ್ದಾರೆ ಅವರು
ಇದೇನು ಹೊಸದಲ್ಲ ಎಂಬಂತೆ.

ಎತ್ತಿ ಕುಕ್ಕಿದೆ ನೆಲಕ್ಕೆ ಯಜ್ಞನನ್ನು ಒಂದಲ್ಲ ಎರೆಡೆರಡು ಬಾರಿ
ಆ ಲೋಹಿತ ಕೈ ಮುಗಿದ ‘ಬಿಡು ಅವನನ್ನು’
ಯಾರೋ ಅಂದರು ಜನ
‘ಬಿಡುತ್ತಾನೆ ತಂದುಕೊಡು ಆತನ ಪ್ರಾಣವನ್ನು’

‘ನಮಗೂ ಬರುತ್ತದೆ ಕಾಲ ಎಂಬುದನ್ನು ಮರೆತಿದ್ದೀಯಾ ನೀನು’
ಸುತ್ತ ನೋಡಿದೆ
ಎಷ್ಟೋ ವರ್ಷಗಳಿಂದ ಮಸೆಯುತ್ತ ಬಂದಿದ್ದ ಕುಡುಗೋಲು
ಕಿಲಕಿಲ ನಗುತ್ತಿತ್ತು.
ಎತ್ತಿ ತಂದು
ಇದೇ ಬೆರಳುಗಳು
ಇದೇ ತೋಳುಗಳಿಂದ ಹಿಡಿದು ಬಿಗಿ ಕುಡುಗೋಲು
ಕರಕರ ಕತ್ತರಿಸಿದೆ ಅವನ ಕೊರಳ
ಅಪ್ಪನಿಗಿಂತ ಮೊದಲು ಹೋಗಿರಬೇಕು ನೀನು ಯಮನ ಲೋಕಕ್ಕೆ
ಕುಣಿದೆ ಆ ರಕ್ತ ನೋಡಿ
ಅಪ್ಪನೇ ಭೂಮಿಯಾಗಿ ಕುಡಿದು ಚೇತನ
ತುಂಬಿಕೊಳ್ಳುತ್ತಾನೋ ಎಂಬಂತೆ
ಅಪ್ಪನ ಕೊನೆ ನೋಟವನ್ನು ಎದುರಿಸಲಾರದವನಾಗಿದ್ದ ನಾನು
ಕೇಕೆ ಹಾಕಿದೆ ಇವನ ನಿಸ್ತೇಜ ಕಣ್ಣುಗಳನ್ನು ಕಂಡು
ಇವನೆದೆಗೆ ಕಿವಿಯಿಟ್ಟು ದೃಢಪಡಿಸಿಕೊಂಡೆ
ಸ್ಥಗಿತ ಹೃದಯ ಬಡಿತವನ್ನು
ಆತುರದಿಂದ ಅಪ್ಪನನ್ನು ಅಪ್ಪಿಕೊಂಡೆ
ಈಗಲಾದರೂ ನಿನ್ನ ಎದೆ ಬಡಿಯಲಿ ಎಂದು

‘ಇಲ್ಲ ಅಪ್ಪನ ಎದೆಗೂಡೊಳಗೆ
ಯಾವ ಹಕ್ಕಿಯೂ ಕೂಗಲಿಲ್ಲ
ಅವನ ಕಣ್ಣ ನೋಟದಲ್ಲಿ
ಶೂನ್ಯದ ಹೊರತು ಮತ್ತೇನೂ ಕಾಣಲಿಲ್ಲ.
ಏನಾದರೂ ಮಾತುಗಳು ಪಿಸುಗುಟ್ಟುತ್ತಿರಬಹುದೆಂದು
ಮತ್ತಷ್ಟು ಬಿಗಿದಪ್ಪಿ ಆಲಿಸಿದೆ
ಬದುಕ ಕಥೆಗೆ ಚರಮ ಗೀತೆ ಹಾಡಿದ ಮೇಲೆ
ಹೇಳುವುದಾದರೂ ಏನಿದೆ? ಪ್ರಶ್ನಿಸಿತು
ಅವನ ಅಡ್ಡಬಿದ್ದ ಮುಖ.’

* * *

ಅಂಗುಲಿಮಾಲ ತನ್ನ ಎರಡೂ ಕೈಗಳಿಂದ
ಕಣ್ಣುಗಳನ್ನು ಒತ್ತಿ
ಕಣ್ಣೀರನ್ನು ಒರೆಸಿಕೊಂಡ.
ನೆನಪು ಸಾಗರದಲ್ಲಿ ಮುಳುಗಿ ಹೋದ ಅವನು
ಏನನ್ನೋ ಮರ್ಮರಿಸಿದ
ತನ್ನ ಬಲಿಷ್ಠ ಕೈಗಳಿಂದ ತಲೆಯನ್ನು ಒತ್ತಿಕೊಂಡ
ಬೇಡ . . . ಬೇಡ . . .

ಎದ್ದು ನಿಂತ ಅವನು
‘ನಾನು ನನ್ನ ಅವ್ವ, ಸುನೀಲಳನ್ನು ನೋಡಬೇಕು
ನನಗೆ ಅವರು ಮುಖ ಮುಚ್ಚಿಕೊಂಡು

ಅಳುತ್ತಿರುವ ದೃಶ್ಯವೇ ಕಾಣತ್ತಿದೆ.
ಹಾಸಿಗೆ ಹಿಡಿದರೂ ದುಡಿಯುತ್ತಿರುವ
ಮುದಿ ಮೂಳೆ ಚರ್ಮಗಳ ನಿಟ್ಟುಸಿರೇ ನನ್ನನ್ನು ಕಾಡುತ್ತಿದೆ
ಕಥೆ ಹೇಳಲಾರೆ ನಾನು
ಹೇಳಿ ಮಾಡುವುದಾದರೂ ಏನು
ನನ್ನನ್ನು ಹೋಗಲು ಬಿಡು
ನಾನು ದುಃಖಿತಪ್ತ ಜನರನ್ನು ಕಾಡಿಗೆ ಕರೆತರುತ್ತೇನೆ.
ಇಲ್ಲಿಂದ ಶುರುವಾಗಲಿ ಹೊಸ ಬದುಕ ಯುದ್ಧ ಅವರಿಗೆ
ರಕ್ತದ ಹನಿಗಳಿಂದ ಕಟ್ಟಿದ ಸುಖದ ಖಜಾನೆಯನ್ನು ಲೂಟಿ
ಮಾಡಬೇಕು ನಾವು
ಹೋಗಲು ಬಿಡು ನನ್ನನ್ನು'

ಬುದ್ಧ ತನ್ನ ತೇಜಃ ಕಣ್ಣುಗಳಿಂದ ನೋಡುತ್ತಲೇ ಇದ್ದ

'ಸಮಾಧಾನಿಸಿಕೋ
ಪರಿಹಾರವಿದೆ ಪ್ರತಿಯೊಂದಕ್ಕೆ ಜಗದೊಳಗೆ'
ಏನನ್ನಿಸಿತೋ ಅಂಗುಲಿಮಾಲ ಕುಳಿತು ಹೇಳತೊಡಗಿದ
'ಅಪ್ಪನನ್ನು ಹಾಗೇ ಮಲಗಿಸಿ ಈಚೆ ತಿರುಗಿದೆ
ಯಜ್ಞನ ಮುಂಡ ಬಿದ್ದಿತ್ತು ಅಲ್ಲಿ
ಎರಡು ಕೈಗಳೂ ಚಾಚಿದ್ದವು.

'ಅದೇ, ಅದೇ ಕೈಗಳು ಅಪ್ಪನನ್ನು ಆ ಕಲ್ಲು ದಾರಿಯಲ್ಲಿ
ಎಳೆದು ತಂದಿದ್ದು
ಆ ಪಾಶದಂಥ ಕೈಗಳೇ ಸುನೀಲಳನ್ನು ಹಿಡಿದು
ಸೂರೆ ಮಾಡಿದ್ದು
ಅದೇ ಕೈಗಳ ಮುಷ್ಟಿಯಲ್ಲೇ ಕೂಲಿಗಳು ನರಳುತ್ತಿದ್ದುದು

ಆ ಕೈಗಳನ್ನು ನನ್ನ ಮುಷ್ಟಿಯಿಂದ ಹಿಡಿದೆ
ನನ್ನ ಏಕಾಯುಧ ಕುಡುಗೋಲಿನಿಂದ
ಬೆರಳುಗಳನ್ನು ಕತ್ತರಿಸಿದೆ.
ಅವನದೇ ಧೋತರ ಕಿತ್ತು ಬೆರಳುಗಳನ್ನು
ಮಣಿಗಳಂತೆ ಕಟ್ಟಿದೆ
ಅದೇ ನನಗೆ ದೀಕ್ಷೆ
ಅದೇ ನನ್ನ ಪ್ರತೀಕ್ಷೆ
ಅದೇ ನನ್ನ ಪ್ರತಿಜ್ಞೆ

ಬಡವರನ್ನು ಕೊಲ್ಲುವ ಕೈಗಳು ಇರಬಾರದು
ಅದೇ ನನ್ನ ಮಂತ್ರ
ಅದೇ ನನ್ನ ಈ ಅಂಗುಲಿಮಾಲೆ

ಹಳೆಯದು ರಕ್ತ ಸೋರುವುದು ನಿಂತು
ನಿಸ್ತೇಜವಾದ ಮೇಲೆ
ಹೊಸದೊಂದು ಅಲಂಕರಿಸುತ್ತದೆ ಈ ಕೊರಳನ್ನು
ಅದೇ ನನ್ನ ತಪಸ್ಸು.
ಅದೇ ನನಗೆ ಶಾಂತಿ.

* * *

ಬುದ್ಧ ಅಂದ, 'ಮಗುವೆ
ಯೌವನದ ಚೇತನ ಅಚಾತುರ್ಯವನ್ನೆಸಗುತ್ತದೆ.
ಅದು ದ್ವೇಷಕ್ಕೆ ಸಹನೆಯ ಬದಲಾಗಿ ಶಸ್ತ್ರವನ್ನೂ
ಪ್ರೀತಿಯ ಶಕ್ತಿಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮೊದಲು
ಹಿಂಸೆಯನ್ನೂ ಹಿಡಿಯುತ್ತದೆ
ಅವಮಾನಕ್ಕೆ ಹಿಂಸೆ ಉತ್ತರವಾಗುವುದಕ್ಕಿಂತಲೂ
ತಾಳ್ಮೆ ಉತ್ತರವಾಗುತ್ತದೆ
ಅರ್ಥ ಮಾಡಿಕೊಳ್ಳಲಾರೆಯಾ ಕಂದ?'

'ಅರ್ಥ ಮಾಡಿಕೊಳ್ಳಬಲ್ಲೆ ಗುರುವೆ
ಎಲ್ಲರ ಹೃದಯದಲ್ಲಿ ಬರೀ ಮಾತುಗಳಿಗಾಗಿ
ಅರಳಬಹುದಾದ, ಬಾಡಬಹುದಾದ
ಹೂಗಳಿರುವುದಾಗಿದ್ದರೆ
ಪ್ರೀತಿಯ ಪನ್ನೀರು ಎಲ್ಲ ತೋಟಗಳಲ್ಲಿ ಚಿಗುರು ತರಿಸಬಲ್ಲವಾಗಿದ್ದರೆ
ಸಹನೆಯ ಮರದ ಬೇರುಗಳನ್ನೂ ಕಿತ್ತು
ಬೆಂಕಿಗೆದುರಾಗಿ ಹರವುವವರು ಇರದಿದ್ದರೆ
ನಾನು ಅರ್ಥ ಮಾಡಿಕೊಳ್ಳಬಲ್ಲವನಾಗಿದ್ದೆ.
ತಂದೆಯೇ
ಹುಲಿಯ ಉಗುರುಗಳಿಗೆದುರಾಗಿ
ಹಸುವಿಗೆ ಪ್ರೀತಿ ಕಲಿಸಬೇಕೆ?
ಸಿಂಹಕ್ಕೆ ಸಹನೆ ಕಲಿಸಲು
ಆನೆ ತನ್ನ ಸೊಂಡಿಲು ಕೆಳಗಿಳಿಸಬೇಕೆ?
ಹಿಡಿದ ಬಲೆಗೆ ಪ್ರೀತಿ ಕಲಿಸಲು
ಹಕ್ಕಿ ಕೊಕ್ಕಿನ ಸಾಮರ್ಥ್ಯ ಮರೆತುಬಿಡಬೇಕೆ?
'ನಾನು ಬಂಡೆಯಾಗಿದ್ದೆ
ಭೂಮಿಯಾಳದಲ್ಲಿ ಮೂಳೆಯಂತೆ ಸೇರಿಹೋಗಬಹುದಾಗಿದ್ದೆ
ಆದರೆ ನನ್ನನ್ನವರು ಹಾಗೇ ಬಿಡಲಿಲ್ಲ.

ನನ್ನ ಹೃದಯಕ್ಕವರು ನಿರಂತರವಾಗಿ ದಾಳಿ ಮಾಡಿದರು
ಹಾಗಾಗಿ ಬಂಡೆ ಹೃದಯದಿಂದ
ಜ್ವಾಲಾಮುಖಿ ಪ್ರವಾಹ ನುಗ್ಗಿ ಬಂತು

‘ಆಮೇಲೆ
ಆ ಮಾಲೆ ಕೊರಳಿಗೇರಿಸಿ
ಒಂದು ಕ್ಷಣವೂ ಅಲ್ಲಿರಲಿಲ್ಲ ನಾನು
ಹೊರಟೆ ಒಬ್ಬನೇ
ತಿವಿದು ಬಿಟ್ಟ ಗೂಳಿಯಂತೆ
ಸುಸ್ತಾಗಿ ನೆಲಕ್ಕೊರಗುವವರೆಗೂ ನಡೆದೆ
ಯಾವುದೊ ಹಳ್ಳಿಯ ಪಕ್ಕ ಮರದಡಿಯಲ್ಲಿ ಮಲಗಿದೆ
ರಾತ್ರಿ ಬೆಳದಿಂಗಳಲ್ಲಿ ನಾನು ಅಗೆದೆ
ನಮ್ಮ ಆಳಗಳನ್ನು, ಅಗಲಗಳನ್ನು
ಗಾಳಿ ನಿಃಶಬ್ದವಾಗಿರುವಾಗ
ನಕ್ಷತ್ರ ತಮ್ಮ ಸ್ಥಾನಗಳಿಂದ ಇಣುಕುತ್ತಿರುವಾಗ
ಮರಗಿಡಗಳು ಸ್ತಬ್ಧ ಶೋಕ ಸಭೆಯಂತೆ
ಇಬ್ಬನಿ ಹನಿಯನ್ನು ತರ್ಪಣ ಬಿಡುತ್ತಾ ನಿಂತಿರುವಾಗ

‘ಹೌದು, ಇದು ಭೂಮಿ
ಆದರೆ ಇದಲ್ಲ ಈಗ ಭೂಮಿ
ಈಗ ಅವರವರ ಗುಹೆಗಳಲ್ಲಿ, ಮನೋಗಹ್ವರಗಳಲ್ಲಿ
ನಾಳೆಯ ಗಾಢ ಚಿಂತೆ ಒಳಗೆ ತಳ್ಳಿ ನಿದ್ದೆ ಬೀಗ ಹಾಕಿದೆ
ಕನಸುಗಳಲ್ಲಿ ಎಚ್ಚರಿದ್ದಾರೆ ಅವರು
ನಕ್ಷತ್ರ ಲೋಟದಲ್ಲಿ ಕೈಯಿಟ್ಟು ಅಮೃತಸುರೆಗೆ ಕಾಯುತ್ತಾ
‘ಹಳಹಳಿಸುತ್ತಾ ಕೆಲವರು ಹೊರಳಾಡುವ ಧ್ವನಿ
ಸಾಂತ್ವನಕ್ಕಾಗಿ ಮೂಕ ಜಗತ್ತಿಗೆ ಮೊರೆಯಿಡುತ್ತಿದೆ
ಮೂಕವಾಗಿ
ಹೃದಯ ಒಡೆವಂತೆ ಗಂಟಲು ಬಿರಿವಂತೆ
ಕಿರುಚುತ್ತಾ ಮಹಾ ಮೌನವಾಗಿ ಕಿವುಡು ಜಗತ್ತಿಗೆ
ಹಳಹಳಿಕೆ ಬರೀ ನೆನಪುಗಳಿಗಲ್ಲ
ಆಕಾಂಕ್ಷೆಗಳಿಗೆ

‘ಚಿಂತೆಗಳ ಕಾಟ ನಿದ್ದೆಯನ್ನು ಎತ್ತಿಕೊಂಡು ಹೋಯಿತು.
ಮತ್ತೆ ಮತ್ತೆ ಅಪ್ಪ ಕಣ್ಣ ಮುಂದೆ ಬಂದ
ಆತನಿಗೊಂದು ಭೌತಿಕ ಚಹರೆ ಇತ್ತು
ಅದು ಮಣ್ಣಲ್ಲಿ ಲೀನವಾಗಿ ಹೋದರೂ
ಎಲ್ಲೆಲ್ಲೂ ಓಡಾಡುವುದ ಕಾಣಬಲ್ಲೆ ನಾನು
ಭೂಮಿಯ ನಿಟ್ಟುಸಿರು ಬಿರುಗಾಳಿಯಾದಾಗ
ನಾನು ಅವನ ಉಸಿರನ್ನು ಅದರೊಳಗೆ ಗುರುತಿಸಬಲ್ಲೆ.
ಆತನಿಗೆ ಅಭೌತಿಕವಾದ ಒಂದು ವ್ಯಾಪ್ತಿ ಇತ್ತು.
ತನ್ನ ಮರಣದ ‘ಏಕಾಂಗಿ ಮರ್ಮರದಲ್ಲಿ’
ಅವನು ಎಲ್ಲೆಲ್ಲೂ ಗುರುತಿಸಿಕೊಳ್ಳಬಲ್ಲವನಿದ್ದ
ಹೊಸೆದು ಬಿಸಾಕಲ್ಪಟ್ಟ ಅವನ ಜೀವನ ಕಾವ್ಯದಲ್ಲಿ
ಒಂದು ಕ್ಷೀಣ ಎಳೆ ಸಹ ನೋವಿನ ಸಂಕಟದಿಂದ

ತಪ್ಪಿಸಿಕೊಂಡಿರಲಿಲ್ಲ.

‘ಆತನ ಪ್ರೀತಿ
ಹೃದಯದೊಳಕೋಣೆಯೊಳಗೆ ಮೌನದ ಶೀತವದಲ್ಲಿ
ಹರಳುಗಟ್ಟಿದ ತಂಪು ನೀರಧಾರೆ
ಈ ಶರೀರದಿಂದ ಹೊರಬೀಳುವ
ಒಂದೊಂದು ಧ್ವನಿಯೂ
ಆ ಬೇರಿನ ಹಾಡಲ್ಲದೆ ಬೇರೆ ನುಡಿಗಳಲ್ಲ
ಆ ಬೇರಿನ ಜೊತೆಯಲ್ಲಿ
ನಾನು ನನ್ನ ಹೃದಯವನ್ನು ಅವಮಾನಗಳಿಂದ
ಪದೇ ಪದೇ ಸುಟ್ಟುಕೊಂಡೆ
ಅಚಲವಾಗುತ್ತಾ ಹೋಯಿತದರ ತಿರುಳು
ಕಬ್ಬಿಣದಂತೆ ಗಟ್ಟಿಯಾಗಿ ಒರಟಾಯಿತು ಕೂಡ
ಮುದುರಿದೆಲೆಗಳ ನಾಚಿಕೆ ಗಿಡದ ಮುಳ್ಳಿನಂತೆ
ಕರಗುವುದನ್ನು ಕಲಿಯಿತು ಅದು
ಬೆಚ್ಚಗಿನ ಪ್ರೀತಿಯಪ್ಪುಗೆಗೆ ಮಂಜುಗಡ್ಡೆಯಂತೆ . . . .
ಆಲೋಚಿಸುತ್ತಾ ನಾನು ನಿದ್ದೆ ಹೋದೆ

* * *

‘ಯಾರೋ ಬಂದು ತಲೆ ನೇವರಿಸಿದಂತಾಯಿತು
ಸುಮ್ಮನೆ ಮಲಗಿದ್ದೆ ಕಣ್ಣು ತೆರೆಯದೆ
ಅದೇ ಕೈಗಳು ಎದೆಯ ಮೇಲೂ ಬಂದವು ಅಭಯ ಹಸ್ತದಂತೆ
ಇದೇನು ಮಾತುಗಳಿಲ್ಲದ ಪ್ರೀತಿಯೋ
ಇದೇನು ಹೃದಯ ತುಂಬಿದ ಕರುಣೆಯೋ
ಕಣ್ಣುತೆರೆದು ನೋಡಿದರೆ ನನ್ನ ತಾಯಿ
ಹಾಲು ಬಟ್ಟಲ್ಹಿಡಿದು ಕುಳಿತಿದ್ದಾಳೆ
ಕಣ್ಣೀರು ಸುರಿಸುತ್ತಾ
ನನ್ನ ಕೈಗಳಲ್ಲಿ ಹಿಡಿದು ತನ್ನ ಕಣ್ಣೀರೊರೆಸಿಕೊಳ್ಳುತ್ತಾ
ಮತ್ತಷ್ಟು ಬಿಕ್ಕಿದಳು

‘ಏನೆನ್ನಲಿ ತಾಯಿ ನಾನು
ಇಲ್ಲಿಗೂ ಬಂದೆಯಾ ನೀನು
ನಿನ್ನ ಸುಟ್ಟ ಹೃದಯಕ್ಕೆ ನಾನು ತಂಪೆರೆಯಲಾರೆ
ನಿನ್ನ ತಾಯ್ಗರುಳಿಗೆ ನಾನು ಉತ್ತರ ಹೇಳಲಾರೆ,
ನಿನ್ನೆಲ್ಲ ದುಃಖಗಳಿಗೂ
ನಾನು ಹೇಗೆ ಸಂತೈಕೆ ನೀಡಲಿ
ಅಥವಾ ನಾನಾದರೂ ಭಾವನೆಗಳ ಜ್ವಾಲಾಮುಖಿ ಏಳುವ
ದೇಹವಲ್ಲವೆ?
ಹೋಗು ತಿರುಗಿ ಹೋಗು
ಈ ಹೃದಯ ಬಿಗಿದುಕೊಳ್ಳುತ್ತಿದೆ
ನಿನ್ನೆಲ್ಲ ನೋವುಗಳನ್ನು ನನಗೆ ಕೊಡು

ನಿನ್ನ ಹತಾರಗಳನ್ನೆಲ್ಲ ಧಾರೆಯೆರೆ,
ನಿನ್ನ ಸೇಡನ್ನೆಲ್ಲ ನನ್ನ ಹೃದಯದಲ್ಲಿ ಹುಗಿದಿಡು ಹುದುಗಿಡು
ನೀನು ಭರವಸೆಯ ವಾಗ್ದಾನದಂತೆ ತಂದಿರುವ
ಹಾಲನ್ನು ಇತ್ತ ಕೊಡು, ಸೇವಿಸುತ್ತೇನೆ
ಇದು ಭೂ ತಾಯಿಯೇ ಕೊಟ್ಟ ವಾಗ್ದಾನ ನನಗೆ
ಇದು ಎಲ್ಲ ಸುಟ್ಟ ಕರುಳುಗಳ ಕಣ್ಣೀರು
ಇದು ಎಲ್ಲ ಸುನೀಲೆಯರ ಆರ್ತನಾದ
ಇದನ್ನು ಸೇವಿಸಿಯೇ ನಾನು ಮುಂದೆ ಹೋಗುತ್ತೇನೆ

'ಅಮ್ಮ ನನ್ನು ಕಳಿಸಿ ನಾನು ಹೊರಟೆ
ತಿರುಗಿ ನೋಡದೆ ಎಂದೆಂದೂ ಸಹ
ಪಕ್ಕದ ಹಳ್ಳಿಗೆ
ಕುಲೀನರ ಕೇರಿ ಅದು
ಬಾತುಕೊಂಡಿದ್ದ ಹೆಜ್ಜೆಗಳನ್ನಿಡುತ್ತಾ ಹೋದೆ

'ಒಂದು ಮುದುಕಿ! ಪಾಪ . . . .
ಚಳಿಯಲ್ಲಿ ನಡುಗುತ್ತಿತ್ತು ಬೀದಿ ಪಕ್ಕ
ಯಾಕೆ ನರಳುತ್ತಿದ್ದಿ ತಾಯೇ ಎಂದೆ
ಹೊಟ್ಟೆಗೇನಾದರೂ ಇದ್ದರೆ ಕೊಡು ಕಂದ
ಕೈ ಚಾಚಿದಳು

'ಹಸಿದ ಹುಲಿಯಂತೆ ಆ ದೊಡ್ಡ ಮನೆಗೆ ನುಗ್ಗಿದೆ
ಅಡುಗೆ ಮನೆ
ಅತಿಥಿಗಳಿಗೆ ಹಾಕಿದ್ದ ಮಣೆ
ಎಂದೂ ನೋಡಿರಲಿಲ್ಲ ಕುಲೀನರ ಮನೆಯೊಳಗೆ ನಾನು
ಮಾಡಿಟ್ಟ ಅಡಿಗೆಯನ್ನೆಲ್ಲ ಎಳೆದು ಹೊರತಂದು
ಮುದುಕಿ ಎದುರು ಇಟ್ಟೆ
ಹೇಳಿದಳು ಮುದುಕಿ
ಬೇಡ ಅವರ ಮನೆ ಅಡಿಗೆ ಅವರಿಗೆ
ಕೊಟ್ಟರೆ ತೆಗೆದುಕೊಳ್ಳೋಣ

'ಸುಮ್ಮನಿರು ತಾಯಿ
ಅಲ್ಲಿ ಬೆಂದ ಅನ್ನ ನಮ್ಮ ಕಣ್ಣೀರು ಹರಳುಗಟ್ಟಿದ್ದು
ಬೇಯಿಸಿದ ಬೆಂಕಿ
ನಮ್ಮ ಕರುಳು ಜ್ವಾಲೆಯಾಗಿದ್ದು

ಅದು ಅವರ ಅಡಿಗೆ ಅಲ್ಲ
ನಮ್ಮ ಅಡಿಗೆ ತೆಗೆದುಕೋ ಮತ್ತು ತಿಳಿದುಕೋ.

‘ಮುದುಕಿ ಮಾತ್ರ ಅಲ್ಲ
ಹಾಗೇ ಹಸಿದವರನೇಕರು ಬಂದರಲ್ಲಿ.
ಇಲ್ಲಿ ನನ್ನ ಸುತ್ತ ಕುಳಿತ ಜನ
ಹಾಗೇ ಬಂದವರು

‘ಇದು ನನ್ನ ಕಥೆ
ಹಸಿದವರೆಲ್ಲರ ಕಥೆ
ಹಸಿದವರಿರುವವರೆಗೂ ಮುಂದುವರಿಯುವ ಕಥೆ

‘ಶಾಂತಿ ಪ್ರೀತಿಯ ಬೀಜ ಚೆಲ್ಲುತ್ತಿರುವ ಬುದ್ಧದೇವನೆ
ಇಗೋ ನನ್ನ ಹೃದಯ ಫಲವತ್ತಾಗಿದೆ
ಅಲ್ಲಿ ಬೆಳೆದ ಹುಣ್ಣುಗಳನ್ನು ಕೈಯಾರೆ ಕಿತ್ತು ಕಿತ್ತು
ರಕ್ತ ಹಾಯಿಸಿ ಸಜ್ಜು ಮಾಡಿಟ್ಟಿದ್ದೇನೆ
ಆ ಬೆಳೆಯನ್ನು ಬೆಳೆಯಲು
ಪ್ರಪಂಚದ ಎಲ್ಲ ಹೃದಯಗಳು ಹುಣ್ಣಿನಿಂದ ಮುಕ್ತವಾಗಿದ್ದರೆ
ಜಯವಾಗಲಿ ಜಯವಾಗಲಿ ಬುದ್ಧದೇವನಿಗೆ ಜಯವಾಗಲಿ.

*　　*　　*